## ಮಂಗಳೂರು ವಿಶ್ವವಿದ್ಯಾಲಯ

**ಶ್ರೀ ಶಾರದಾ ಕಾಲೇಜು, ಬಸ್ರೂರು**
**ಕುಂದಾಪುರ, ಉಡುಪಿ –576211**

**ಕಿರು ಸಂಶೋಧನಾ ವರದಿ**

# ಬಸ್ರೂರಿನಲ್ಲಿ ಶಾಸನ ಸಹಿತ ಶೈವಪಂಥ ಮತ್ತು ವೈಷ್ಣವ ಪಂಥದ ಕಂಚಿನ ಕಂಬಗಳು – ಒಂದು ಅಧ್ಯಯನ

**2023 - 2024**


ಮಾರ್ಗದರ್ಶಕರು: **ಮಮತಾ**
**ಕನ್ನಡ ಉಪನ್ಯಾಸಕಿ**

ಸಂಶೋಧನಾರ್ಥಿಗಳು: **ಪ್ರವೀಣ** (U05RS21A0006)
**ಅಭಿಷೇಕ್** (U05RS21A0005)
**ಪ್ರಿನ್ಸನ್** (U05RS21A0019)

ತರಗತಿ: **ತೃತೀಯ ಬಿ.ಎ.**

# Permission Letter

This is to Certify that **Praveen, Prinson, Abhishek** of III B.A bearing UUCMS no. **U05RS21A0006, U05RS21A0019, U05RS21A0005** has been allotted the title of Internship project/CAR/Field Work as **ಬಸ್ರೂರಿನಲ್ಲಿ ಶಾಸನ ಸಹಿತ ಶೈವಪಂಥ ಮತ್ತು ವೈಷ್ಣವ ಪಂಥದ ಕಂಚಿನ ಕಂಬಗಳು – ಒಂದು ಅಧ್ಯಯನ** in completion of the B. A Programme during the academic year 2023-24.

Abhishek

Prinson

Principal Name & signature College | Seal HoD | Name & Signature

# ಪರಿವಿಡಿ


| ಕ್ರ.ಸಂ. | ಅಧ್ಯಾಯ | ಪುಟ. ಸಂ. |
|---|---|---|
| 1. | ಪೀಠಿಕೆ | 1–2 |
| 2. | ಶಾಸನದ ಅಧ್ಯಯನದ ಉದ್ದೇಶ, ವ್ಯಾಪ್ತಿ | 3–4 |
| 3. | ಲಿಪಿ, ಶಾಸನದ ಓದು. | 5–7 |
| 4. | ಕರ್ನಾಟಕದಲ್ಲಿ ವೈಷ್ಣವ ಪಂಥ | 8–9 |
| 5. | ಕರ್ನಾಟಕದಲ್ಲಿ ಶೈವ ಪಂಥ | 10 |
| 6. | ಕಾರ್ತಿಕ ದೀಪೋತ್ಸವದ ಕುರಿತು | 11–13 |
| 7. | ಶ್ರೀ ಮಹತೋಭಾರ ಮಹಾಲಿಂಗೇಶ್ವರ ದೇವಸ್ಥಾನ | 14–17 |
| 8. | ವಿನಾಯಕ ದೇವರ ಕಂಚಿನ ದೀಪಸ್ತಂಭದ ವಿವರ | 18–19 |
| 9. | ಬಸ್ರೂರಿನ ಶ್ರೀ ತಿರುಮಲ ವೆಂಕಟರಮಣ ದೇವಾಲಯ | 20–21 |
| 10. | ದೀಪ ಸ್ತಂಭದಲ್ಲಿ ಕೆತ್ತಲಾಗಿರುವ ಶಿಲ್ಪಗಳು ಮತ್ತು ಅದರ ಹಿನ್ನೆಲೆ | 22 |
| 11. | ವೈಷ್ಣವ ಕಂಚಿನ ಕಂಬದ ವಿವರ | 23–24 |
| 12. | ಫಲಿತಗಳು | 25–26 |
| 13. | ಉಪಸಂಹಾರ | 27 |
| 14. | ಪರಾಮರ್ಶನ ಗ್ರಂಥಗಳ ವಿವರ | 28 |
| 15. | ತಿರುಮಲ ವೆಂಕಟರಮಣ ದೇವಸ್ಥಾನದ ಮತ್ತು ಕಂಚಿನ ಸ್ಥಂಬದ ಚಿತ್ರ | 29–30 |
| 16. | ಶ್ರೀ ಮಹತೋಭಾರ ಮಹಾಲಿಂಗೇಶ್ವರ ದೇವಸ್ಥಾನ ಮತ್ತು ಕಂಚಿನ ಸ್ಥಂಬದ ಚಿತ್ರ | 31–32 |
| 17. | ಛಾಯಾ ಚಿತ್ರಗಳು | 33 |
| 18. | ಪತ್ರಿಕಾ ವರದಿ | 34–35 |

# ಬಸ್ರೂರಿನಲ್ಲಿ ಶಾಸನ ಸಹಿತ ಶೈವ ಪಂಥ ಮತ್ತು ವೈಷ್ಣವ ಪಂಥದ ಕಂಚಿನ ಕಂಬಗಳು – ಒಂದು ಅಧ್ಯಯನ

**ಪೀಠಿಕೆ:**

ಬಸ್ರೂರು ಇತಿಹಾಸದಲ್ಲಿ ಗತ ವೈಭವವನ್ನು ಕಂಡ ಸ್ಥಳ. ಬಸ್ರೂರು ಇಂದಿಗೂ ಕೂಡಾ ಅಂದಿನ ವೈಭವವನ್ನು ಸಾರುತ್ತದೆ. ಅಂದಿನ ವೈಭವದ ಕುರುಹುಗಳು ಅಸಂಖ್ಯವಾಗಿ ಬಸ್ರೂರಲ್ಲಿ ಕಾಣಸಿಗುತ್ತದೆ. ಸುಮಾರು ಆರು ಕಿಲೋಮೀಟರ್ ಸುತ್ತಳತೆಯ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಬಸ್ರೂರು ಆಗರ, ಸಾಮಾಜಿಕ ಘಟಕಗಳ ಕೇಂದ್ರ. ರಾಜಕೀಯ, ಆರ್ಥಿಕ ವೈಶಿಷ್ಟ್ಯವುಳ್ಳ ವ್ಯವಹಾರಗಳ ಕೇಂದ್ರವಾಗಿತ್ತು. ಇಂಥ ಐತಿಹಾಸಿಕ ಮತ್ತು ಚಾರಿತ್ರಿಕ ಮಹತ್ವವುಳ್ಳ ಬಸ್ರೂರಿನ ಭವ್ಯ ಪರಂಪರೆಯನ್ನು ಉಳಿಸುವ ಹಾಗೂ ಗತ ವೈಭವದ ಚಿತ್ರವೊಂದನ್ನು ಪುನರಚಿಸುವ ನೆಲೆಯಲ್ಲಿ ಈ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

ಬಸ್ರೂರಿನಲ್ಲಿ ಆಳ್ವಿಕೆ ಮಾಡಿದ ರಾಜ ಮನೆತನಗಳಲ್ಲಿ ಕೆಳದಿಯ ಆಳುಪರಸರು ಪ್ರಮುಖರಾದವರು. ಕ್ರಿ.ಶ 1155 ರ ಕವಿಯಾಳುಪೇಂದ್ರನೆಂಬ ಆಳುಪರಸನ ಶಾಸನದಲ್ಲಿ ಒಂದು 'ಹೊಸಪಟ್ಟಣ ಬಸುರೆಪುರ' ಎಂದಿದೆ. ಈ ಬಸುರೆಪುರವೆಂಬುದು ಬಸರೂರಾಗಿ ರೂಪಾಂತರ ಹೊಂದಿರಬಹುದು. ಲಿಂಗಣ್ಣ ಕೃತ ಕೆಳದಿ ನೃಪ ವಿಜಯದಲ್ಲಿ "ವಸುಪುರ" ದ ಉಲ್ಲೇಖವಿದೆ. (ಹೆಸರಾದ ಪಟ್ಟಣ ಬಸರೂರು ಒಂದು ಅಧ್ಯಯನ ಪುಟ ಸಂಖ್ಯೆ–3)

ಸ್ಥಳಿಯವಾಗಿ ಬಸ್ರೂರಿನಲ್ಲಿ ಯಾವ ಅರಸನಿದ್ದನೆಂಬುದು ಇಂದಿಗೂ ವಿಸ್ಮಯವಾಗಿಯೇ ಉಳಿದಿದ್ದರೂ ತುಳುನಾಡನ್ನು ಅವ್ಯಾಹತವಾಗಿ ಒಂದು ಸಾವಿರ ವರ್ಷಗಳಿಗಿಂತಲೂ ಹೆಚ್ಚು ಕಾಲದವರೆಗೆ ಆಳಿಕೊಂಡಿದ್ದ ಆಳುಪರಸರ ಅಧೀನವಾಗಿ ಈ ಪಟ್ಟಣವಿತ್ತೆಂದು ತಿಳಿಯಬಹುದು. ಈ ಪಟ್ಟಣದ ವೈಶಿಷ್ಟವನ್ನು ಬಾದಾಮಿ ಚಾಲುಕ್ಯರ ವಿಜಯನಗರದ ಅರಸರು, ಅನಂತರ ಕೆಳದಿ ನಾಯಕರು ಕೊಂಡುಕೊಂಡು ಇದನ್ನು ಒಂದು ಉತ್ತಮ ರೇವವಾಗಿಯೂ ಸುಭದ್ರ ಸ್ಥಳವಾಗಿಯೂ ಕಾಪಾಡಿಕೊಂಡಿರಬೇಕು. ಮಧ್ಯಕಾಲದಲ್ಲಿ ಎಂದರೆ ಕ್ರಿ.ಶ 15ನೇ ಶತಮಾನದಿಂದ ಕ್ರಿ.ಶ 18ನೇ ಶತಮಾನದವರೆಗೂ ಇದರ ಆಡಳಿತವನ್ನು ಸುರಾಲಿನ ತೊಳರಹರು ಬಾರ್ಕೂರಿನ ವಿಜಯನಗರದ ರಾಜ್ಯಪಾಲರ ಕೈ ಕೆಳಗೂ ಅನಂತರ ಕೆಳದಿಯ ಕಾಪಾಡಿಕೊಂಡಿರಬೇಕು. ಕ್ರಿ. ಶ 18ನೇ ಶತಮಾನದವರೆಗೆ ಇದರ ಆಡಳಿತವನ್ನು ಸುರಾಲಿನ ತೊಳಹರು ಬಾರಕೂರಿನ ವಿಜಯನಗರದ ರಾಜ್ಯಪಾಲರ ಕೈ ಕೆಳಗೂ ಅನಂತರ ಇಕ್ಕೇರಿ ನಾಯಕರ ನಡೆಸುತ್ತಿದ್ದಿರಬೇಕು.

ಬಸ್ರೂರಿನನ ದೇವ ಮಂದಿರಗಳನ್ನು ಪರಿಶೀಲಿಸಿದರೆ ಇಲ್ಲಿ ಶೈವ, ಶಾಕ್ತ, ವೈಷ್ಣವ ಈ ಮೂರು ಪಂಥಗಳು ಸಾಕಷ್ಟು ಪ್ರಸಿದ್ಧಿ ಪಡೆದ್ದಿದ್ದುವೆನ್ನಬಹುದು. ನಖರೇಶ್ವರ ದೇವಾಲಯವು ಬಸ್ರೂರಿನ ಹಿರಿಯ ದೇಗುಲವೆನ್ನಬಹುದು 'ನಖರ'ವೆಂಬ ವ್ಯಾಪಾರ ಸಂಸ್ಥೆಯಿಂದ ಸ್ಥಾಪಿತವಾದ ದೇಗುಲವಿದು. ಇದನ್ನು ಈಗ

ಮಹತೋಭಾರ ಮಹಾಲಿಂಗೇಶ್ವರವೆಂದು ಕರೆಯುತ್ತಾರೆ. ದೇಗುಲಕ್ಕೆ ಕ್ರಿ. ಶ. 12ನೇ ಶತಕದಲ್ಲಿ ಉಲ್ಲೇಖವಿದೆ. ಊರ ಪ್ರಮುಖ ಮಂದಿರವಾದ ಈ ದೇವಸ್ಥಾನ 'ಮಂಡಿಕೇರಿ'ಯಲ್ಲಿ ಅಥವಾ ನಗರ ಮಧ್ಯದಲ್ಲಿದ್ದು ಇದರ ಎಡ ಭಾಗದಿಂದ ಉತ್ತರಾಭಿಮುಖವಾಗಿ ಚಲಿಸಿದರೆ ಹಿಂದೆ ನಾವೆಗಳು ನಿಲ್ಲುವ ಬಂದರು ಸ್ಥಳ ಸಿಗುತ್ತದೆ. ಹಾಗೆಯೇ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದೆದುರಿನ ಬೀದಿಯ ದಕ್ಷಿಣ ದಿಕ್ಕಿನಿಂದ ಸುಮಾರು 200 ಮೀಟರ್ ತನಕ ರಾಹುತಕೇರಿ ಇದೆ ಈ ಕೇರಿಯ ಕೊನೆಯಲ್ಲಿ ಶ್ರೀ ತಿರುಮಲ ವೆಂಕಟರಮಣ ಗುಡಿ ಇದೆ. ಉತ್ತರಭಿಮುಖವಾಗಿರುವ ಈ ಗುಡಿಯಲ್ಲಿ ರಾಮಾಂಜನೇಯ, ಗಜಲಕ್ಷ್ಮಿ, ಹಾಗೂ ಗರುಡ ಮೂರ್ತಿಗಳ ಕಲಾತ್ಮಕವಾಗಿವೆ. ಬಸ್ರೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಹಾಗೂ ಶ್ರೀ ತಿರುಮಲ ವೆಂಕಟರಮಣ ದೇವಾಲಯದ ಎದುರು ಇರುವ ಪ್ರಾಚೀನ ಕಂಚಿನ ದೀಪ ಸ್ತಂಭದ ಕುರಿತು ಈ ಸಂಶೋಧನೆಯ ಅಧ್ಯಯನ ನಡೆಸಲಾಗಿದೆ. ಇದರ ಕುರಿತಂತೆ ಈಗಾಗಲೇ ಆ ಎರಡು ದೀಪ ಸ್ತಂಭಗಳ ಶಾಸನಗಳನ್ನು ಶ್ರೀ ಪ್ರದೀಪ್ ಕುಮಾರ್ ಬಸ್ರೂರು ಸಂಶೋಧನೆ ನಡೆಸಿ ಗುರುತಿಸಿದ್ದಾರೆ. ಅವರ ಅಧ್ಯಯನದ ಪ್ರಕಾರ ಸುಮಾರು 500 ವರ್ಷಗಳ ಹಿಂದಿನ ವೈಭವವನ್ನು ಶಿಲ್ಪಕಲೆಯ ಮೂಲಕ ಕೆತ್ತಿರುವುದನ್ನು ಗುರುತಿಸಿದ್ದಾರೆ. ಹಲವು ಹಿರಿಯರ, ಇತಿಹಾಸ ತಜ್ಞರ, ಮಾರ್ಗದರ್ಶನ, ಅಭಿಪ್ರಾಯಗಳು ಅವರಿಗೆ ಈ ಸಂದರ್ಭದಲ್ಲಿ ದೊರೆತಿದ್ದು ಅವರು ಸಂಶೋಧನೆ ನಡೆಸಲು ಸಾಧ್ಯವಾಗಿದೆ.

ಪ್ರಸ್ತುತ ಅಧ್ಯಯನವು ಆ ಎರಡು ಕಂಚಿನ ಕಂಬಗಳ ಅಧ್ಯಯನದ ಮಹತ್ವ, ಅದರ ವಾಸ್ತು ಶಿಲ್ಪ ವೈಶಿಷ್ಟ್ಯತೆ ಶಾಸನದ ವಿವರ, ವಾರ್ಷಿಕ ದೀಪೋತ್ಸವದ ಪ್ರಾಮುಖ್ಯತೆ, ರಾಜಮನೆತನಗಳ ಕೊಡುಗೆಗಳ ಕುರಿತು ಅಧ್ಯಯನ ನಡೆಸಿರುತ್ತದೆ. ಅದರ ವಿವರಗಳನ್ನು ಇಲ್ಲಿ ಗುರುತಿಸಬಹುದಾಗಿದೆ.

# ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಒಂದು ನಾಡಿನ ಇತಿಹಾಸವೆಂದರೆ ಆ ನಾಡನ್ನು ಕಾಲದಿಂದ ಕಾಲಕ್ಕೆ ಆಳಿದ ರಾಜರ ಇತಿಹಾಸವೆಂದರೆ ಆ ನಾಡನ್ನು ಕಾಲದಿಂದ ಕಾಲಕ್ಕೆ ಆಳಿದ ರಾಜರ ಇತಿಹಾಸವೆಂಬ ಭಾವನೆ ಬಹು ಪ್ರಚಲಿತವಾಗಿದೆ. ಒಂದು ನಾಡು ಎಂದರೆ ಅದನ್ನು ಆಳಿದ ರಾಜರು ಅಲ್ಲ, ಅಲ್ಲಿ ಬದುಕಿದ ಜನ. ಹೀಗೆ ಬದುಕಿದ ಜನರ ಒಂದು ಗಣನೀಯವಾದ ಭಾಗ ಆ ನಾಡನ್ನಾಳಿದ ರಾಜಸಮೂಹ. ಒಂದು ದೇಶದ

ನಿಜವಾದ ಇತಿಹಾಸವೆಂದರೆ ಆ ಜನತೆಯ ಇತಿಹಾಸ. ಜನತೆ ಬದುಕಿದ ರೀತಿ, ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಅದರ ಜೀವನ ಸಮಸ್ಯೆಗಳು, ಅದರ ಜೀವನ ಮೌಲ್ಯಗಳು ಇತ್ಯಾದಿಗಳ ವಿವರಣೆಯೇ ಆ ದೇಶದ ಇತಿಹಾಸ.

ಕನ್ನಡ ನಾಡಿನ ರಾಜಕೀಯ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಹಲವು ಗ್ರಂಥಗಳಾಗಲೇ ಹೊರಬಿದ್ದಿವೆ. ಭಾರತದ ಇತಿಹಾಸವನ್ನು ಕುರಿತು ಗ್ರಂಥಗಳಲ್ಲಿ ಕನ್ನಡನಾಡಿನ ಕೆಲವು ಪ್ರಮುಖ ರಾಜಕುಲಗಳ ಪ್ರಸ್ತಾಪವು ಸಂಕ್ಷಿಪ್ತವಾಗಿ ಬಂದಿರುತ್ತದೆ. ಕರ್ನಾಟಕದ ಅದರಲ್ಲಿಯೂ ಉತ್ತರ ಕರ್ನಾಟಕದ ರಾಜಮನೆತನಗಳ ಇತಿಹಾಸವನ್ನು ಕುರಿತು ಡಾ॥ ಫ್ಲೀಟ್ ಅವರು ಗ್ರಂಥವೊಂದನ್ನು "THE DYNASTIES OF THE KANARESE DISTRICTS" ಬರೆದಿದ್ದಾರೆ. ಆ ವಿಷಯವನ್ನು ಕುರಿತಾದೆ ಬರಹಗಳಲ್ಲಿ ಇದು ಇಂದಿಗೂ ಪ್ರಮಾಣಭೂತ ಕೃತಿಯಾಗಿದೆ. ರೈಸ್, ಮೊರೇಸ್, ಡೆರೆಟ್, ಅಲ್ಟೇಕರ್, ಸಾಲೆತ್ತೂರ, ಎಂ. ವಿ. ಕೃಷ್ಣರಾವ್, ವಿನ್ಸೆಂಟ್‌ಸ್ಮಿತ್, ಹಯವದನ ರಾವ್ ಮುಂತಾದವರು ಬೇರೆ ಬೇರೆ ರಾಜಕುಲಗಳನ್ನು ಕುರಿತು ಚರಿತ್ರೆಗಳನ್ನು ಬರೆದಿದ್ದಾರೆ. ಇವರ ರಾಜಕುಲಗಳನ್ನು ಕುರಿತು ಚರಿತೆಗಳನ್ನು ಬರೆದಿದ್ದಾರೆ. ಇವರ ಗ್ರಂಥಗಳು ಮುಖ್ಯವಾಗಿ ರಾಜಕೀಯ ಇತಿಹಾಸವನ್ನು ಕುರಿತವಾದರೂ ಆ ಕಾಲದ ಸಾಮಾಜಿಕ ಜೀವನವನ್ನು ಚಿತ್ರಿಸಲು ಸಾಕಷ್ಟು ಪುಟಗಳನ್ನು ಮೀಸಲಿರಿಸುವುದು ಉಂಟು. ಕನ್ನಡದಲ್ಲಿ ಡಾ॥ ಸಾಲೆತ್ತೂರರ ಗ್ರಂಥ: ಶ್ರೀಯುತರಾದ ಲಕ್ಷ್ಮೀನಾರಾಯಣರಾವ್ ಮತ್ತು ಆರ.ಎಸ್ ಪಂಚಮುಖಿಯವರ "ಕರ್ನಾಟಕದ ಅರಸುಮನೆತನಗಳು"– ರಚಿತವಾದ ಈ ಗ್ರಂಥಗಳ ಪ್ರಧಾನ ಉದ್ದೇಶ ಕರ್ನಾಟಕದ ರಾಜಕೀಯ ಇತಿಹಾಸವನ್ನು ಚಿತ್ರಿಸುತ್ತದೆ.

**ಶಾಸನಗಳು ಮತ್ತು ಅವುಗಳ ಅಧ್ಯಯನ**

ತಾಳೆಗರಿ, ಭೂರ್ಜಪತ್ರ ಕಾಗದ ಮುಂತಾದವುಗಳ ಮೇಲೆ ಕಂಡುಬರುವ ಬರೆಹಗಳನ್ನು ಬಿಟ್ಟು, ಬಹುಕಾಲ ಉಳಿಯುವ ಸಾಮಗ್ರಿಯ ಮೇಲೆ ಬರೆದಿರುವ ಬರೆಹಗಳನ್ನು ಶಾಸನಗಳೆಂದು ಸ್ಥೂಲವಾಗಿ ಕರೆಯಬಹುದು. 'ಶಾಸನ' ಶಬ್ದದ ಮೂಲಾರ್ಥ 'ಆಜ್ಞೆ' ಎಂದು. ಕೌಟಿಲ್ಯ ಹೀಗೆ ಒಂದು ಕಡೆ ಹೇಳುತ್ತಾನೆ– "(ಪ್ರಾಚೀನರು) ಹೇಳುತ್ತಾರೆ –ಶಾಸನ(ಎಂಬ ಪದ ) ರಾಜರ ಆಜ್ಞೆಗಳನ್ನು ತಿಳಿಸುವ ಬರೆಹವನ್ನು

ಹೇಳುತ್ತದೆ." ಅರ್ಥ ಶಾಸ್ತ್ರ 2-10 ಶುಕ್ರಾಚಾರ್ಯರ ಶುಕ್ರನೀತಿಸಾರದಲ್ಲಿ ರಾಜ ಶಾಸನ ಪ್ರಭೇದಗಳ ಒಂದು ದೊಡ್ಡ ಪಟ್ಟಿಯನ್ನು ಕೊಟ್ಟಿದೆ. ಅವರ ಪ್ರಕಾರ "ಶಾಸನ ಪತ್ರದಲ್ಲಿ ರಾಜನ ಸ್ವಂತ ರುಜುವೂ, ಆ ಆಜ್ಞೆ ಹೊರಟ ದಿನಾಂಕವೂ ಇರಬೇಕು. ಮತ್ತು ಹೀಗೆ ಆರಂಭವಾಗಬೇಕು –"ನೀವೆಲ್ಲ ಕೇಳಿರಿ. ನೀವೆಲ್ಲ ಹೀಗೆ ಮಾಡಬೇಕು ಮತ್ತು ಆಜ್ಞೆಯಂತೆ ನಡೆದುಕೊಳ್ಳಬೇಕು" ಇತ್ಯಾದಿ.

ಶುಕ್ರಾಚ್ಯಾರರ ಪ್ರಕಾರ ಇನ್ನೊಂದು ರೀತಿಯ ಶಾಸನಗಳುಂಟು. ಇವುಗಳನ್ನು ಆಜ್ಞಾಪತ್ರಗಳೆಂದು ಕರೆಯುತ್ತಾರೆ. ಇವು ಸಾಮಂತರಿಗೆ, ಮಾಂಡಲಿಕರಿಗೆ ಮತ್ತು ಇತರ ಅಧಿಕಾರಿಗೆ ಮತ್ತು ಒಪ್ಪಿಸಿದ ಕರ್ತವ್ಯಗಳ ನಿರೂಪಣೆಗಳು"

ಶಾಸನಗಳು ಮೊದಲು ರಾಜಾಜ್ಞೆಗಳಾಗಿದ್ದುವು. ("ಶಾಸ್" ಎಂಬ ಧಾತುವಿಗೆ ಆಜ್ಞೆ ಮಾಡು, ಶಿಕ್ಷಿಸು, ನಿಯಂತ್ರಿಸು ಮುಂತಾದ ಅರ್ಥಗಳಿವೆ). ಕಾನೂನುಗಳನ್ನು ಜನರಿಗೆ ಪ್ರಕಟಿಸುವ ಬರಹಗಳೇ ಶಾಸನಗಳು.

ರಾಜನೇ ಆಗಲಿ ಅಥವಾ ಬೇರೆಯವರು ಯಾರೇ ಆಗಲಿ– ಅವರು ದಾನವನ್ನು ಕೊಟ್ಟಾಗ, ಆ ದಾನದ ವಿಷಯದಲ್ಲಿ ಕೆಲವು ನಿಯಮಗಳನ್ನು ಹಾಕಿ, ಯಾರು ಉಲ್ಲಂಘಿಸಕೂಡದೆಂದೂ, ಎಲ್ಲರೂ ಆ ದಾನವನ್ನು ಕಾಪಾಡಿಕೊಂಡು ಬರಬೇಕೆಂದೂ ಕೇಳಿಕೊಳ್ಳುತ್ತಿದ್ದರು. ಹೀಗೆ ಪರ್ಯಾಯವಾಗಿ ಇಂತಹ ಇತರ ಬರೆಹಗಳಿಗೂ ಶಾಸನಗಳೆಂಬ ಹೆಸರು ರೂಢಿಗೆ ಬಂದಿತು. ಈ ಅರ್ಥವು ಇನ್ನೂ ವಿಸ್ತಾರವಾಗಿ ರಾಜರ ಪ್ರಶಸ್ತಿಯನ್ನು ಹೇಳುವ, ವೀರರ ಸಾವನ್ನು, ಸನ್ಯಾಸಿಗಳ ಮರಣವನ್ನು, ಕೊನೆಗೆ ಶಿಲ್ಪದ ಅಥವಾ ಶಿಲ್ಪಿಯ ಹೆಸರನ್ನು ಹೇಳುವ ಬರೆಹಗಳಿಗೂ "ಶಾಸನ" ಎಂಬ ಹೆಸರು ಅನ್ವಯವಾಯಿತು. ಉದಾಹರಣೆಗೆ, ದಾನಶಾಸನವಿರುವ ಕಲ್ಲನ್ನು 'ಶಾಸನದ ಶಿಲಾಸ್ತಂಭ'ವೆಂದು ಕರೆದಿರುವುದನ್ನು ಇಲ್ಲಿ ನೆನೆಯಬಹುದು.

# ಲಿಪಿ ಶಾಸನದ ಓದು

ಒಂದು ಕಾಲಕ್ಕೆ ಅಧಿಕೃತ ದಾಖಲೆಯಾಗಿದ್ದ, ಎಷ್ಟೋ ವರ್ಷಗಳ ನಂತರ ಓದಲೇ ಆಗದಿದ್ದ ಶಾಸನಗಳ ಓದು ಆರಂಭವಾದ ತರುಣದಲ್ಲಿ ಅದು ಒಂದು ಇಲಾಖೆಯ ವಿದ್ವಾಂಸರುಗಳಿಗೆ ಮಾತ್ರ ಅರ್ಥವಾಗುವಂತಾಗಿತ್ತು. ಪುರಾತತ್ವ ಇಲಾಖೆಯ ಶಾಸನ ತಜ್ಞರ ಮೂಲಕ ವಿಶ್ವವಿದ್ಯಾನಿಲಯಗಳ ವಿದ್ವಾಂಸರವರೆಗೆ ವಿಸ್ತರಿಸಿದ ಶಾಸನಾಧ್ಯಯನವು ಕಳೆದ ಶತಮಾನದ ಎಪ್ಪತ್ತರ ದಶಕದಲ್ಲಿ ಹವ್ಯಾಸಿ ಶಾಸನಾಸಕ್ತರವರೆಗೆ ವಿಸ್ತರಿಸಿತು. ಕಬ್ಬಿಣದ ಕಡಲೆ ಎಂದುಕೊಂಡಿದ್ದ ಶಾಸನ ಅಧ್ಯಯನವು, ಹದವಾಗಿ ಕಾಯಿಸಿ ಬಡಿದಾಗ, ಉಪಯುಕ್ತ ಉಪಕರಣಗಳ ಸೃಷ್ಟಿಗೆ ಅವಕಾಶ ನೀಡುತ್ತದೆ ಎಂದು ಮನವರಿಕೆಯಾಯಿತು. ಒಂದು ನಾಡಿನ ಸಮಗ್ರ ಇತಿಹಾಸ ಮತ್ತು ಸಾಂಸ್ಕೃತಿಕ ಬಗ್ಗೆ ಖಚಿತವಾದ ಹಾಗೂ ಸತ್ಯವಾದ ಮಾಹಿತಿಗಳು ಬೇಕು ಎಂದು ಅಪೇಕ್ಷಿಸುವ ಆಸಕ್ತರನ್ನು ಶಾಸನಗಳು ಕೈಬೀಸಿ ಕರೆದವು. ನೆಲದಲ್ಲಿ ಹೂತು ಹೋಗಿದ್ದ, ಜನರ ಮೂಢನಂಬಿಕೆಗಳಿಗೆ ಬಲಿಯಾಗಿದ್ದ ಶಾಸನಗಳು ಬೆಳಕಿಗೆ ಬಂದು, ಕಳೆದ ಬದುಕಿನ ಇತಿಹಾಸವನ್ನು ಸಂಸ್ಕೃತಿಯ ಶ್ರೀಮಂತಿಕೆಯನ್ನು ಪ್ರೀತಿ, ವಿಶ್ವಾಸಗಳನ್ನು ಪರಿಚಯಿಸಿದವು.

ಕನ್ನಡ ಲಿಪಿ ಶಾಸ್ತ್ರಕ್ಕೆ ಸಂಬಂಧಿಸಿದಂತೆ 1975 ರಲ್ಲಿ ಪ್ರಕಟವಾದ ಡಾ.ಎ.ವಿ.ನರಸಿಂಹಮೂರ್ತಿ ಅವರ 'ಕನ್ನಡ ಲಿಪಿಯ ಉಗಮ ಮತ್ತು ವಿಕಾಸ' ಮೊದಲ ಪ್ರಕಟಿತ ಗ್ರಂಥ ಎನ್ನಬಹುದು.

ಹಾಗೂ 1996 ರಲ್ಲಿ ಡಾ. ಎಂ.ಜಿ. ಮಂಜುನಾಥ ಮತ್ತು ಶ್ರೀ ಜಿ.ಕೆ. ದೇವರಾಜಸ್ವಾಮಿ ಅವರ 'ಕನ್ನಡ ಲಿಪಿಶಾಸ್ತ್ರ' ಮತ್ತು 2019 ರಲ್ಲಿ ಪ್ರಕಟವಾದ 'ಕನ್ನಡ ಲಿಪಿ ವಿಕಾಸ' ಮತ್ತು 2002 ರಲ್ಲಿ ಡಾ. ದೇವರಕೊಂಡಾರೆಡ್ಡಿ ಅವರ ಲಿಪಿಯ ಹುಟ್ಟು ಮತ್ತು ಬೆಳವಣಿಗೆಗಳೆಂಬ ಕೃತಿಗಳು ಲಿಪಿಶಾಸ್ತ್ರಕ್ಕೆ ಸಂಬಂಧಿಸಿದ ಅಧ್ಯಯನ ಯೋಗ್ಯವೆನಿಸಿದೆ.

'ಕನ್ನಡ ಲಿಪಿ ವಿಕಾಸ ಕೃತಿಯಲ್ಲಿ ಅಶೋಕನ ಬ್ರಾಹ್ಮೀ ಲಿಪಿಯಿಂದ ಪ್ರಾರಂಭಿಸಿ ಮೈಸೂರು ಒಡೆಯರ ಲಿಪಿಯವರೆಗೆ ಎಲ್ಲಾ ಕಾಲಘಟ್ಟದ ಲಿಪಿ ಸ್ವರೂಪಗಳನ್ನು ಕಾಗುಣಿತಗಳ ಸಹಿತ ನೀಡಲಾಗಿದೆ.

**ಲೇಖನ ಸಾಮಗ್ರಿಗಳು :** ಪ್ರಾಚೀನ ಕಾಲದಲ್ಲಿ ಹಲವು ರೀತಿಯ ವಸ್ತುಗಳ ಮೇಲೆ ಬರೆಯುತ್ತಿದ್ದರು. ಹಾಗೆ ಬರೆಯಲು ಉಪಯೋಗಿಸುತ್ತಿದ್ದ ಲೇಖನ ಸಾಮಾಗ್ರಿಗಳೆಂದರೆ ಮಣ್ಣು, ಕಲ್ಲು, ಕಬ್ಬಿಣ, ಚಿನ್ನ, ಬೆಳ್ಳಿ, ತಾಮ್ರ, ಕಂಚು, ಹಿತ್ತಾಳೆ, ದಂತ, ಸ್ಫಟಿಕ, ಚರ್ಮ, ಮರ, ಮೂಳೆ, ಭೂರ್ಜ ಪತ್ರ, ತಾಳೆಗರಿ, ಕಡತ, ಕಾಗದ ಮುಂತಾದವು ಪ್ರಮುಖವಾದವು.

**ಕಂಚು** : ಕಂಚು ಒಂದು ಮಿಶ್ರಲೋಹವಾಗಿದ್ದು, ವಿಗ್ರಹಗಳನ್ನು ಎರಕ ಹೊಯ್ದು ನಿರ್ಮಿಸಲು ಸೂಕ್ತವಾದ ಲೋಹವಾಗಿರುವುದರಿಂದ ಕಂಚಿನ ಶಿಲ್ಪಗಳು ವಿಫುಲವಾಗಿ ದೊರೆಯುತ್ತದೆ. ಅಂತಹ ಶಿಲ್ಪಗಳ ಮೇಲೆ ಶಾಸನಗಳೂ ಬಹಳಷ್ಟು ದೊರೆತಿವೆ. ಪೇಶಾವರ್‌ನಲ್ಲಿ ದೊರೆತಿರುವ ಕಂಚಿನ ಶಿರದ ಮೇಲೆ ಒಂದು ಶಾಸನವನ್ನು ಕೊರೆದಿರುವುದನ್ನು ಗಮನಿಸಬಹುದು. ಕಂಚಿನಿಂದ ಮಾಡಿದ ಒಂದು ಅಚ್ಚಿನಲ್ಲಿ ಕ್ರಿ.ಪೂ. 3–

4ನೇ ಶತಮಾನಕ್ಕೆ ಸೇರಿದ ಬ್ರಾಹ್ಮಿ, ಖರೋಷ್ಠಿ ಮತ್ತು ಗ್ರೀಕ್ ಲಿಪಿಗಳು ದೊರೆತಿವೆ. ತೀರ ಅಪರೂಪದವಾಗಿ ತಾಮ್ರದ ಫಲಕಗಳಂತೆ ಕಂಚಿನ ಫಲಕವನ್ನು ನಿರ್ಮಿಸಿ ಶಾಸನವನ್ನು ಕೆತ್ತಲಾಗುತ್ತಿತ್ತು. ಮಂಡ್ಯ ಜಿಲ್ಲೆಯ ಗುತ್ತಲು ಗ್ರಾಮದಲ್ಲಿನ ಅರ್ಕೇಶ್ವರ ದೇವಾಲಯದಲ್ಲಿ ಕಂಚಿನ ಫಲಕದ ಮೇಲೆ ಬರೆಯಲಾಗಿರುವ ಒಂದು ಜಯಪತ್ರ ದೊರೆತಿದೆ.

ಚಿನ್ನ, ಬೆಳ್ಳಿ, ಹಿತ್ತಾಳೆ, ತಾಮ್ರ ಹಾಗೂ ಕಂಚಿನ ಮಿಶ್ರಣವುಳ್ಳ ಪಂಚಲೋಹದ ಸಾವಿರಾರು ವಿಗ್ರಹಗಳು ಭಾರತದೆಲ್ಲೆಡೆ ಇವೆ. ಅವುಗಳ ಪೀಠದಲ್ಲಿ ಶಾಸನಗಳನ್ನು ಕೆತ್ತಿರುವ ನಿದರ್ಶನಗಳೂ ಹಲವಾರು ದೊರೆಯುತ್ತವೆ. ಕರ್ನಾಟಕದಲ್ಲಿ ಇಂತಹ ಶಾಸನ ಸಹಿತವಾದ ಹಲವಾರು ಪಂಚಲೋಹದ ವಿಗ್ರಹಗಳು ದೊರೆತಿವೆ. ನಮ್ಮ ಅಧ್ಯಯನದ ಎರಡು ಕಂಚಿನ ಕಂಬಗಳಲ್ಲಿನ ವಿನ್ಯಾಸ, ಬರಹಗಳು ದೊರೆತಿರುವುದು ಅಪರೂಪದ ವಿಷಯಗಳಲ್ಲಿ ಒಂದೆನ್ನಬಹುದು.

ಇತಿಹಾಸದ ಅಧ್ಯಯನದಲ್ಲಿ ಬರವಣಿಗೆಯ ರೂಪದಲ್ಲಿರುವ ದಾಖಲೆಗಳು ಅತ್ಯಂತ ಪ್ರಮುಖವಾದ ಮೂಲಭೂತ ಆಕರಗಳೆನ್ನಿಸಿವೆ.

ವೇದಗಳ ಕಾಲಕ್ಕಿಂತಲೂ ಹಲವು ಶತಮಾನಗಳಷ್ಟು ಪೂರ್ವದಲ್ಲಿಯೇ ಸಿಂಧೂ ನದಿಯ ಬಯಲಿನಲ್ಲಿ ದೊರೆತಿರುವ ಮಣ್ಣಿನ ಫಲಕಗಳ ಮೇಲೆ, ಬಳಪದ ಕಲ್ಲಿನ ಫಲಕಗಳ ಮೇಲೆ ಬರೆಯಲ್ಪಟ್ಟ ಸಿಂಧೂ ಲಿಪಿಯೇ ಭಾರತದಲ್ಲಿ ಉಪಲಬ್ಧವಾಗಿರುವ ಅತ್ಯಂತ ಪ್ರಾಚೀನ ಲಿಪಿಯಾಗಿದೆ. ಕ್ರಿ.ಪೂ. 3ನೇ ಶತಮಾನದ ಅಶೋಕನ 'ಬ್ರಹ್ಮಗಿರಿ ಶಾಸನ'ವು ಬ್ರಾಹ್ಮಿ ಲಿಪಿಯಲ್ಲಿದ್ದು ಇದರಲ್ಲಿ ಕನ್ನಡದ ಪ್ರಾಚೀನತೆಯ ಪದ 'ಇಸಿಲ' ದೊರೆತಿದೆ.

**ಶಾಸನಗಳ ಪಡಿಯಚ್ಚು ತೆಗೆಯುವ ಆಧುನಿಕ ವಿಧಾನಗಳು :**

ಈ ಹಿಂದೆ ಶಿಲಾ ಶಾಸನಗಳ ಪಡಿಯಚ್ಚನ್ನು ತೆಗೆಯಲು ಶಿಲೆಯನ್ನು ಸ್ವಚ್ಛಗೊಳಿಸಿ, ಹಲವು ವಿಧನಗಳಲ್ಲಿ ಜಾಗ್ರತೆಯಿಂದ ಪಡಿಯಚ್ಚನ್ನು ಸಂಗ್ರಹಿಸಲಾಗುತ್ತಿತ್ತು. ಆದರೆ ಆ ಕಾಲದಲ್ಲಿ ಛಾಯಾಚಿತ್ರ ಗ್ರಹಣವು ಈಗಿನಷ್ಟು ಬಳಕೆಯಲ್ಲಿರಲಿಲ್ಲ.

ಇಂದು ಕಾಲ ಬದಲಾದಂತೆ ಪಡಿಯಚ್ಚು ತೆಗೆಯುವುದಕ್ಕಿಂತಲೂ ಛಾಯಾಚಿತ್ರ ನಿಖರತೆಯನ್ನು ಸ್ಪಷ್ಟತೆಯನ್ನು ನೀಡುವುದರಿಂದ ಶಾಸನಗಳ ಪಡಿಯಚ್ಚನ್ನು ತೆಗೆಯುವುದಕ್ಕಿಂತಲೂ ಹೆಚ್ಚು ಜನಪ್ರಿಯವಾಗುತ್ತಿದೆ.

ಶಾಸನಗಳ ಛಾಯಾಚಿತ್ರ ತೆಗೆಯಲು ತೀರಾ ದುಬಾರಿಯಾದ ಕ್ಯಾಮರಾದ ಅವಶ್ಯಕತೆಯಿಲ್ಲ. ಆದರೆ ಇಂದಿನ ಆಧುನಿಕ ತಂತ್ರಜ್ಞಾನ ಹೊಂದಿರುವ ಕ್ಯಾಮರಾ ಬಳಸಿ ಶಾಸನದ ಚಿತ್ರ ತೆಗೆದರೆ ತೀರಾ ಸಣ್ಣ ಅಕ್ಷರಗಳುಳ್ಳ ಶಾಸನವನ್ನು ಸಹ ಸ್ಪಷ್ಟವಾಗಿ ಕಾಣುವಂತೆ ಚಿತ್ರಿಸಬಹುದು.

ಇತ್ತೀಚಿನ ದಿನಗಳಲ್ಲಿ ಜನಪ್ರಿಯವಾಗುತ್ತಿರುವ ವಿಡಿಯೋ ಕ್ಯಾಮರಾದಿಂದ ಶಾಸನವನ್ನು ಚಿತ್ರಿಸಿ ನಂತರ ಟಿ.ವಿ.ಯ ಪರದೆಯ ಮೇಲೆ ಮತ್ತೆ ನೋಡುತ್ತಾ ಶಾಸನ ಪಾಠವನ್ನು ಸುಲಭವಾಗಿ ಪಡೆಯಬಹುದು. ಖಿಜಿಟಲ್ ಕ್ಯಾಮರಾದಿಂದ ಶಾಸನಗಳ ಚಿತ್ರವನ್ನು ತೆಗೆದು ಶಾಸನದ ಒಂದೊಂದು ಅಕ್ಷರವನ್ನು ದೊಡ್ಡದಾಗಿಸಿಕೊಂಡು ಶೇಕಡಾ 100 ರಷ್ಟು ನಿಖರವಾಗಿ ಶಾಸನ ಪಾಠವನ್ನು ಸರಿಯಾಗಿ ಓದಬಹುದು.

ತಾಮ್ರ ಶಾಸನಗಳ ಪಡಿಯಚ್ಚು ತೆಗೆಯುವುದಕ್ಕಿಂತಲೂ ಛಾಯಾಚಿತ್ರ ತೆಗೆಯುವುದೇ ಸೂಕ್ತವೆಂದು ಹೇಳಬಹುದು.

**ಶಾಸನಗಳ ಕಾಲಗಣನೆ :** ಶಾಸನಗಳು ರಚನೆಯಾದ ಕಾಲವನ್ನು ವಿವರಿಸುವ ಸಂದರ್ಭದಲ್ಲಿ ರಾಜನ ಆಳ್ವಿಕೆಯ ವರ್ಷ, ಶಕ ಸಂವತ್ಸರ, ಕಲಿಯುಗ ಸಂವತ್ಸರ, ವಿಕ್ರಮ ಶಕೆ, ಚಾಲುಕ್ಯ ವಿಕ್ರಮಶಕೆ, ಇತ್ಯಾದಿ ಶಕಗಳ ಉಲ್ಲೇಖಗಳೊಡನೆ ಪ್ರಭವ, ವಿಭವ, ಇತ್ಯಾದಿ ಸಂವತ್ಸರಗಳ ಹೆಸರು, ಅಯನ, ಮಾಸ, ತಿಥಿ, ವಾರ ನಕ್ಷತ್ರ, ಯೋಗಕರಣ ಮುಂತಾದವುಗಳ ವಿವರಗಳನ್ನು ನೀಡಿರುತ್ತಾರೆ. ಈ ವಿವರಗಳ ಆಧಾರದಿಂದ ನಾವು ಆ ಶಾಸನದ ಕಾಲವನ್ನು ನಿರ್ಧರಿಸಬಹುದು.

ಶಾಸನಗಳಲ್ಲಿ ಸಾಧಾರಣವಾಗಿ ಕಂಡು ಬರುವ ಶಕಗಳ ಬಗ್ಗೆ ಜ್ಞಾನವಿದ್ದರೆ ಶಾಸನಗಳ ಕಾಲಗಣನೆಗೆ ಅನುಕೂಲವಾಗುತ್ತದೆ. ಆದ್ದರಿಂದ ಪ್ರಸ್ತುತ ಅಧ್ಯಯನದಲ್ಲಿ ಸ್ತಂಭಗಳ ಕಾಲವನ್ನು ನಾವು ಗುರುತಿಸಲು ಇದು ಅನುಕೂಲವಾಗಿದೆ.

# ಕರ್ನಾಟಕದಲ್ಲಿ ವೈಷ್ಣವ ಪಂಥ

ಭಾಗವತ ಧರ್ಮವು ದಕ್ಷಿಣ ಭಾರತವನ್ನು ಕ್ರಿಸ್ತಶಕಕ್ಕಿಂತ ಪೂರ್ವದಲ್ಲಿಯೇ ಪ್ರವೇಶಿಸಿದ್ದಿತೆಂದು ನಾನಘಾಟ್ ಶಾಸನದಿಂದ ತಿಳಿದು ಬರುತ್ತದೆ. ಕ್ರಿಸ್ತಶಕದ ಆದಿಭಾಗದಲ್ಲಿದ್ದ ತಮಿಳು ನಾಡಿನ ಆಳ್ವಾರರ ಪ್ರಭಾವವು ಕನ್ನಡ ನಾಡಿನ ಮೇಲೆ ಎಷ್ಟರಮಟ್ಟಿಗೆ ಆಯಿತೋ ತಿಳಿಯದು. ಹಿಂದೆ ನಾವು ಭಾಗವತ ಧರ್ಮದ ಇತಿಹಾಸವನ್ನು ನೋಡಿದಂತೆ ಕ್ರಿಸ್ತಶಕದ ಮೊದಲ ಹತ್ತು ಅಥವಾ ಹನ್ನೊಂದು ಶತಕಗಳಲ್ಲಿ ವೈದಿಕಗೊಳಿಸಲ್ಪಟ್ಟ ಭಾಗವತ ಧರ್ಮವು ಕರ್ಣಾಟಕದಲ್ಲಿ ಪ್ರಚುರ್ರವಾಗಿದ್ದಿರಬೇಕು. ಶಾಸನಗಳಲ್ಲಿ 'ಭಾಗವತ,' 'ವೈಷ್ಣವ' ಎಂಬ ಉಕ್ತಿಗಳು ದೊರೆಯುತ್ತವೆ. ಕನ್ನಡ ಭಾಷೆಯ ಅತ್ಯಂತ ಪ್ರಾಚೀನ ಶಾಸನವಾದ ಹಲ್ಮಿಡಿ ಶಾಸನವು (ಕ್ರಿ.ಶ.450) ವಿಷ್ಣುವಿನ ಪ್ರಾರ್ಥನೆಯೊಂದಿಗೆ ಆರಂಭವಾಗುತ್ತದೆ.

ವಿಷ್ಣುವಿನ ಅನುಯಾಯಿಗಳ ಧರ್ಮವನ್ನು ಒಂದು ಶಾಸನವು "ವೈಷ್ಣವಧರ್ಮ" ವೆಂದು ಕರೆದಿರುತ್ತದೆ.

12ನೇ ಶತಮಾನದಲ್ಲಿ ರಾಮಾನುಜರು ಕರ್ಣಾಟಕಕ್ಕೆ ಬಂದು ವಿಷ್ಣುವರ್ಧನನ ಪ್ರೋತ್ಸಾಹವನ್ನು ಪಡೆದು ಕರ್ಣಾಟಕದಲ್ಲಿ ಶ್ರೀ ವೈಷ್ಣವ ಧರ್ಮವನ್ನು ಪ್ರಚಾರ ಮಾಡಿದರು.

ಶ್ರೀ ರಾಮಾನುಜರು, ಶ್ರೀ ಮಧ್ವಾಚಾರ್ಯರು ಕರ್ನಾಟಕ, ಕರಾವಳಿ ಭಾಗ, ಉಡುಪಿ ಭಾಗಗಳಲ್ಲಿ ವೈಷ್ಣವ ಸಂಪ್ರದಾಯವನ್ನು ಪ್ರಚಾರ ಮಾಡಿದರೆನ್ನಬಹುದು. ಉಡುಪಿ ಶ್ರೀ ಕೃಷ್ಣನ ಮಂದಿರ, ಅಷ್ಟಮಠಗಳು ವೈಷ್ಣವ ಪಂಥವನ್ನು ಪ್ರಚುರಪಡಿಸುವಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿದೆ.

ಅಲ್ಲದೇ ನರಹರಿ ತೀರ್ಥರಿಂದ ಆರಂಭವಾದ ಹರಿದಾಸ ಸಾಹಿತ್ಯದ ಪೀಳಿಗೆಯು ಮತ್ತೆ ಕಾಣಿಸಿಕೊಳ್ಳುವುದು ವಿಜಯ ನಗರ ಸಾಮ್ರಾಜ್ಯದ ಆಶ್ರಯದಲ್ಲಿ ಹದಿನೈದನೆಯ ಶತಮಾನದ ಉತ್ತರಾರ್ಧದಲ್ಲಿ. ಶ್ರೀಪಾದರಾಯರು, ವ್ಯಾಸರಾಯರು, ಪುರಂದರ ದಾಸರು, ಕನಕದಾಸರು, ವಾದಿರಾಜರು ಈ ಮೊದಲಾದ ಕೀರ್ತನಕಾರರು ಕನ್ನಡ ನಾಡಿನಲ್ಲಿ ಶ್ರೀ ಕೃಷ್ಣನನ್ನು ಸ್ತುತಿಸುವ ಅಸಂಖ್ಯ ಕೀರ್ತನೆಗಳನ್ನು ರಚಿಸಿ ಕೊಡುಗೆ ನೀಡಿದ್ದಾರೆ.

ಅಂತೆಯೇ ಶ್ರೀ ತಿರುಮಲ ವೆಂಕಟರಮಣ ದೇವಸ್ಥಾನ, ಬಸ್ರೂರು ಇಲ್ಲಿನ ಕಂಚಿನ ಕಂಬದ ಶಿಲ್ಪ ಕಲೆಯು ವೈಷ್ಣವ ಪಂಥದ ಹಿನ್ನಲೆಯನ್ನು ಹೊಂದಿದೆ. ಈ ಪ್ರಾಚೀನ ಕಂಬದ ವಿಶಿಷ್ಟತೆ ಅನನ್ಯವಾದದ್ದು. ಇದರ ಕೆತ್ತನೆ, ಪಟ್ಟಿಕೆಗಳ ನಿರ್ಮಾಣ, ಅಂದಿನ ಕುಸುರಿ ಕೆಲಸದ ಕಲಾತ್ಮಕತೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ವಿಸ್ಮಯ ಮೂಡಿಸುತ್ತದೆ.

ಈ ಕಂಬದ ಮೊದಲ ಪಟ್ಟಿಕೆ ಅಂದರೆ ಕೆಳಭಾಗದಲ್ಲಿ ಕೂರ್ಮಾವತಾರ (ಆಮೆಯ ರೂಪವನ್ನು ಹೊಂದಿದ್ದು, ಕೂರ್ಮದ ಮೇಲ್ಭಾಗದಲ್ಲಿ ಬರೆವಣಿಗೆ ಕೂಡಾ ಇದೆ. ಆಮೆ ತನ್ನ ಮೇಲೆ ಗಜ (ಆನೆ) ಯನ್ನು

ಹೊತ್ತುಕೊಂಡಿರುವ ಸನ್ನಿವೇಶ ಬಹಳ ವಿಶೇಷವಾಗಿ ಕಾಣಲ್ಪಟ್ಟಿವೆ. ಶ್ರೀ ಕೃಷ್ಣನ ಬಾಲ್ಯ ಜೀವನದ ಲೀಲೆಗಳನ್ನು ವರ್ಣಿಸುವ ಹಲವು ಘಟನೆಗಳನ್ನು ವಿಶೇಷವಾಗಿ ಕಾಣಬಹುದು. ಆಂಜನೇಯ. ಗರುಡ ಶಿಲ್ಪಕಲೆ ಈ ಭಾಗದಲ್ಲಿ ಕಂಡು ಬಂದಿದೆ.

## ಕರ್ನಾಟಕದಲ್ಲಿ ಶೈವ ಪಂಥ

ಕನ್ನಡ ಶಾಸನಗಳನ್ನು ನೋಡಿದರೆ ಲಕುಲೀಶ ಪಾಶುಪತರು ವೈದಿಕರಾಗಿದ್ದು ಬ್ರಾಹ್ಮಣ ರಿಂದಲೂ ಪೂಜಿತರಾಗಿದ್ದರು. ಕರ್ನಾಟಕದಲ್ಲಿ ಬಳ್ಳಿಗಾವೆಯು 11 ಮತ್ತು 12ನೇಯ ಶತಮಾನಗಳಲ್ಲಿ ಪ್ರಸಿದ್ಧ ಶೈವ ಕೇಂದ್ರವಾಗಿ ದಕ್ಷಿಣ ಕೇದಾರವೆಂದು ಪ್ರಸಿದ್ಧವಾಗಿತ್ತು. ಹನ್ನೆರಡನೆಯ ಶತಮಾನದ ಉತ್ತರಾರ್ಧದಲ್ಲಿ– ಬಸವಣ್ಣನವರ ನೇತೃತ್ವದಲ್ಲಿ ವೀರಶೈವ ಧರ್ಮದ ಪುನರುತ್ಥಾನ ಕಾರ್ಯವು ನಡೆಯಿತು. ದಾಸಿಮಯ್ಯ, ಅಲ್ಲಮಪ್ರಭು, ಅಕ್ಕಮಹಾದೇವಿ, ಮುಂತಾದ ವಚನಕಾರರು ಶರಣ ಪರಂಪರೆಯನ್ನು ಕಟ್ಟಿ ಬೆಳೆಸಿ ಶೈವ ಪಂಥವನ್ನು ಪೋಷಿಸಿದ್ದಾರೆ.

ಬಸ್ರೂರಿನ ಕೇಂದ್ರ ಭಾಗದಲ್ಲಿರುವ ಮಹತೋಭಾರ ಮಹಾಲಿಂಗೇಶ್ವರ ದೇವಸ್ಥಾನವು ಅತ್ಯಂತ ಜನಪ್ರಿಯ ಶೈವ ಮಂದಿರವಾಗಿದೆ. ಇದರ ಹೊರಭಾಗದಲ್ಲಿನ ವಿನೂತನ ವಿನಾಯಕ ದೇವರ ಕಂಚಿನ ದೀಪಸ್ತಂಭವು ಅನೇಕ ವೈಶಿಷ್ಟ್ಯಗಳನ್ನು ಹೊಂದಿದೆ. ಕಂಚಿನ ದೀಪಸ್ತಂಭದಲ್ಲಿ ಇರುವ ಗಜಮುಖಗಳೂ, ಗಜದ ಭುಜದ ಮೇಲಿರುವ ಗಣಪತಿಯ ವಿಗ್ರಹವು ಶೈವ ಪಂಥದ ವಾಸ್ತುಶಿಲ್ಪದ ಕೊಡುಗೆ ಎಂದು ಗುರುತಿಸಬಹುದು.

ಅಂತೆಯೇ ದೇವಸ್ಥಾನದಲ್ಲಿ ಗಣಪತಿ, ದುರ್ಗಾದೇವಿ, ಮಹಿಷಮರ್ದಿನಿ, ವೀರಭದ್ರ ಸ್ವಾಮಿಯ ಗುಡಿ, ಶಿವನ ವಾಹನ ನಂದಿ ವಿಗ್ರಹಗಳು ಇಲ್ಲಿ ಸ್ಥಾಪಿಸಲಾಗಿದ್ದು, ಮುಖ್ಯ ದೇಗುಲದ ಅಧಿಷ್ಠಾನಗಳು ಶಿಲಾ ನಿರ್ಮಿತವಾಗಿದ್ದು, ಸುಭದ್ರವಾಗಿದೆ. ಒಂದು ಸಾವಿರ ವರ್ಷಗಳಿಗೂ ಹಿಂದಿನ ಪ್ರಾಚೀನತೆ ಈ ದೇಗುಲಕ್ಕಿದೆ.

# ಕಾರ್ತಿಕ ದೀಪೋತ್ಸವದ ಕುರಿತು

ದೀಪದ ಹಬ್ಬದ ಜೊತೆಗೆ ಶುರುವಾದ ಕಾರ್ತಿಕ ಮಾಸ ನಮ್ಮ ಮಲೆನಾಡು ಮತ್ತು ಕರಾವಳಿ ಭಾಗದ ಜನರಿಗೆ ಬಹಳ ವಿಶೇಷವಾಗಿದ್ದು ಈ ಮಾಸದಲ್ಲಿ ಕೈಗೊಳ್ಳುವ ಪೂಜೆ, ವ್ರತ,ತೇರು, ಜಾತ್ರೆ, ಆಚರಣೆ, ಪುಣ್ಯಕ್ಷೇತ್ರ ಮತ್ತು ದೇವಾಲಯಗಳ ದರ್ಶನ ಒಂದು ಕಡೆ ಆದರೆ ಆದರೆ ಮತ್ತೊಂದು  ಕಡೆ ಕಾರ್ತಿಕ ಮಾಸದಲ್ಲಿ ಮಲೆನಾಡು ಮತ್ತು ಕರಾವಳಿ ಭಾಗಷಃ ಎಲ್ಲಾ ಪ್ರಮುಖ ದೇವಾಲಯಗಳಲ್ಲಿ ನಡೆಯುವ ಲಕ್ಷ ದೀಪೋತ್ಸವ ಇಂದು ಜಗತ್ಪ್ರಸಿದ್ಧ ಆಗಿದೆ ಅಂದರೆ ಇಂದು ಕರ್ನಾಟಕದ ಹಳೆಯ ಮೈಸೂರು, ಹೈದರಬಾದ್ ಕರ್ನಾಟಕ, ಬಾಂಬೆ ಕರ್ನಾಟಕ ಭಾಗದಲ್ಲೂ ಸಹಾ ಇದು ಪ್ರಚಲಿತವಾಗಿದೆ. ಇಂದು ಕಾರ್ತಿಕ ಮಾಸ ಬಂದರೆ ಸಾಕು ಜನರು ಯಾವದೇವಾಲಯಕ್ಕೆ ಹೋಗಿ ಲಕ್ಷ ದೀಪೋತ್ಸವವನ್ನು ಆಚರಿಸೋಣ ಎಂದು ಯೋಚಿಸುತ್ತಾರೆ ಹೊರೆತು ಈ ಆಚರಣೆಯನ್ನು ಯಾಕೆ ಮಾಡುತ್ತಾರೆ. ಇದನ್ನು ಯಾರು ಆರಂಭಿಸಿದರು ಮತ್ತು ಕರ್ನಾಟಕದಲ್ಲಿ ಪ್ರಥಮ ಬಾರಿಗೆ ಲಕ್ಷ ದೀಪೋತ್ಸವ ನಡೆದಿದ್ದು ಯಾವ ದೇವಾಲಯದಲ್ಲಿ ಎಂದು ಯಾರಿಗೂ ತಿಳಿದಿಲ್ಲ. ಕೇವಲ ನಾನೂರ ಹದಿನಾಲ್ಕು(414) ವರ್ಷಗಳ ಇತಿಹಾಸ ಇರುವ ಈ ಆಚರಣೆ ಮತ್ತು ಮಲೆನಾಡು ಶಿವಮೊಗ್ಗಕ್ಕೂ ಅವಿನಾಭಾವ ಸಂಬಂಧ ಇದೆ, ಸಹ ನಮ್ಮ ಶಿವಮೊಗ್ಗದವರೆ.

ದೀಪಾವಳಿಯ ನಂತರ ಕಾರ್ತಿಕ ಮಾಸವು (ನವೆಂಬರ್–ಡಿಸೆಂಬರ್) ಶುರುವಾಗುತ್ತದೆ. ಕಾರ್ತಿಕ ಪೌರ್ಣಮಿಯಂದು ಚಂದ್ರನ ಬೆಳಕು ಎಂದಿಗಿಂತಲೂ ಪ್ರಕಾಶಮಾನವಾಗಿರುತ್ತದೆ. ಚಂದ್ರನು ಭೂಮಿಯ ಸಮೀಪದಲ್ಲಿರುತ್ತಾನೆ ಹಾಗಾಗಿ ಎಂದಿಗಿಂತಲೂ ಶೇ.7ರಷ್ಟು ಹೆಚ್ಚು ಸೂರ್ಯನ ಬೆಳಕನ್ನು ಚಂದ್ರನು ಪ್ರತಿಫಲಿಸುತ್ತಾನೆ ಒಟ್ಟಾರೆ ಹೇಳಬೇಕು ಅಂದರೆ ಚಾಂದ್ರಮಾನದ ಎಂಟನೇ ಮಾಸದಲ್ಲಿ ಕಾರ್ತಿಕ ಎಂಬ ನಕ್ಷತ್ರ ಚಂದ್ರನಿಗೆ ಸಮೀಪಿಸುವ ಪರಿಣಾಮವಾಗಿ ಹುಣ್ಣಿಮೆಯ ಚಂದ್ರನು ಪ್ರಕಾಶಮಾನವಾಗಿ ಬೆಳಗುತ್ತಾನೆ ಕಾರ್ತಿಕ ಮಾಸದಲ್ಲಿ ಸಾಧನೆಯ ಮಾರ್ಗದತ್ತ ಸಾಗಲು ನಮ್ಮ ಋಷಿ  ಮುನಿಗಳು  ಕೆಲವೊಂದು  ವಿಧಾನಗಳನ್ನು ಸೂಚಿಸಿದ್ದಾರೆ ಅವುಗಳಲ್ಲಿ ಸೂರ್ಯ ದೇವನಿಗೆ ಪೂಜೆ, ಶಿವ ಹಾಗೂ ವಿಷ್ಣುವಿನ ಪೂಜೆ, ದೇವರ ಆರಾಧನೆಗಳು, ದಿನಕ್ಕೆ ಮೂರು ಹೊತ್ತು ಸ್ನಾನ  ಮತ್ತು ಮನೆ ಹಾಗೂ ದೇವಾಲಯಗಳಲ್ಲಿ ದೀಪವನ್ನು ಬೆಳಗಿಸುವುದು ಪ್ರಮುಖವಾಗಿದೆ. ನಮ್ಮ ಮಲೆನಾಡು ಮತ್ತು ಕರಾವಳಿಯಲ್ಲಿ ಆಚರಿಸುವ ಎಲ್ಲಾ ಹಬ್ಬ ಮತ್ತು ಆಚರಣೆಗಳು ನೇರವಾಗಿ  ಸಹ್ಯಾದ್ರಿ ಶ್ರೇಣಿ ಅಥವಾ ಪಶ್ಚಿಮ ಘಟ್ಟದ ಪರಿಸರಕ್ಕೆ ಪೂರಕವಾಗಿದ್ದು ಇದಕ್ಕೆ ವೈಜಾನಿಕ ನೆಲೆಗಟ್ಟಿನಲ್ಲೂ ಸಾಬೀತು ಪಡಿಸಬಹುದು. ಆದರೆ ಹದಿನೇಳನೆಯ ಶತಮಾನದ ಆದಿಯಲ್ಲಿ ಅಂದರೆ 1610ರ ಆಸುಪಾಸಿನಲ್ಲಿ ಮಲೆನಾಡು ಮತ್ತು ಕರಾವಳಿಯ ಮನೆಗಳಲ್ಲಿ ದೇವಾಲಯಗಳಲ್ಲಿ ಹಚ್ಚುತ್ತಿದ್ದ ದೀಪಗಳು ಹೇಗೆ ಹೊಸ ರೂಪವನ್ನು ಪಡೆದು "ಲಕ್ಷ ದೀಪೋತ್ಸವ" ಎಂಬ ಆಚರಣೆಗೆ ನಾಂದಿ ಹಾಡಿತು ಎನ್ನುವುದೇ ರೋಚಕವಾದ ವಿಷಯ.

ಅಭ್ಯಂಗ ಸ್ನಾನದ ಪರಿಣಾಮವಾಗಿ ಮಲೆನಾಡಿನ ಜನರು ಚಳಿಗಾಲದಲ್ಲಿ ತಾಗಬಹುದಾದ ಕಾಯಿಲೆಗಳಿಂದ ದೂರ ಮಾಡಲು ಋಷಿಗಳು ಕಾರ್ತಿಕ ಮಾಸದಲ್ಲಿ ಪವಿತ್ರ ಸಸ್ಯಗಳಾದ ತುಳಸಿ ಮತ್ತು ಆಲದ ಮರಗಳನ್ನು ಪೂಜಿಸಲು ಸೂಚಿಸಿದರು. ವೈಜ್ಞಾನಿಕ ದೃಷ್ಟಿಕೋನದಿಂದ ಹೇಳುವುದಾದರೆ ಈ ಸಸ್ಯದಿಂದ ಬೀಸುವ ಗಾಳಿಗಳು ಎಲ್ಲಾ ಬಗೆಯ ವಿಷಕಾರಿ ರಸಾಯನಿಕ ಬ್ಯಾಕ್ಟೀರಿಯಾಗಳನ್ನು ನಿವಾರಿಸುತ್ತದೆ ಮತ್ತು ಮತ್ತು ಈ ಗಿಡ ಮತ್ತು ಮರದ ಗಾಳಿ ಹಾಗೂ ಔಷಧೀಯ ಗುಣಗಳಿಂದ ವ್ಯಕ್ತಿಗೆ ಬರುವ ಅನೇಕ ಸಮಸ್ಯೆಗಳನ್ನು ದೂರ ಇಡಬಹುದು. ಇನ್ನೂ ಮಲೆನಾಡಿನ ಚಳಿಗಾಲದಲ್ಲಿ ಜನರು ನಿದ್ರೆಗೆ ಜಾರ ಬಾರದು ಮತ್ತು ಸೋಮಾರಿ ಆಗಬಾರದು ಎಂದು ನಮ್ಮ ಋಷಿಗಳು ಕಾರ್ತಿಕ ಮಾಸದಲ್ಲಿ ಮೂರು ಹೊತ್ತು ಪವಿತ್ರ ಸ್ನಾನ ಮಾಡಲು ಸೂಚಿಸಿರುತ್ತಾರೆ. ಸ್ನಾನ ಮಾಡುವುದರಿಂದ ಭೌತಿಕವಾಗಿ ದೇಹದ ಕಲ್ಮಷಗಳನ್ನು ತೊಳೆದುಕೊಳ್ಳಬಹುದು. ಅದರೊಂದಿಗೆ, ನಮ್ಮ ಭಾವನೆಗಳನ್ನು, ಮನಸ್ಸಿನ ಕೋಪ, ತಾಪವನ್ನು ನಿಯಂತ್ರಿಸಿಕೊಳ್ಳಬಹುದು. ನದಿ ತೀರಗಳಲ್ಲಿ ಮಾಡುವ ಜಲ ಸ್ನಾನವು ಜಲ ಚಿಕಿತ್ಸೆಗೆ ಪೂರಕವಾಗಿರುತ್ತದೆ. ಪವಿತ್ರ ಸ್ನಾನ ಮಾಡುವುದರಿಂದ ದೇಹ ಹಾಗೂ ಮನಸ್ಸು ಎರಡು ಶುದ್ಧವಾಗುತ್ತದೆ. ಇನ್ನೂ ಮಲೆನಾಡಿನ ಚಳಿಗಾಲದಲ್ಲಿ ಮೂರು ಹಾಗೂ ದೇವಾಲಯಗಳಲ್ಲಿ ದೀಪವನ್ನು ಬೆಳಗುವ ಸಂಪ್ರದಾಯ ಇರುತ್ತದೆ. ಶಿವ ಮತ್ತು ವಿಷ್ಣು ದೇವಾಲಯಗಳಲ್ಲಿ ಸೂರ್ಯೋದಯಕ್ಕೆ ಮುನ್ನ ಮತ್ತು ಸೂರ್ಯೋದಯದ ನಂತರ ಭಗವಂತನ ಪ್ರೀತ್ಯರ್ಥವಾಗಿ ಜ್ಯೋತಿಯನ್ನು ಬೆಳಗಿಸಲಾಗುತ್ತದೆ. ದೀಪಗಳನ್ನು ಅಸುರೀ ಶಕ್ತಿಗಳು ನಾಶವಾಗಿ ಕ್ರಿಮಿ, ಕೀಟಗಳಿಂದ ಪರಿಸರ ಶುದ್ಧವಾಗುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ಈ ದೀಪಗಳು ಜನರ ಪಾಲಿಗೆ ಚಳಿಯಿಂದ ಸಂರಕ್ಷಿಸುವ ಕವಚ ಆಗಿತ್ತು. ಇನ್ನೂ ಇದು ಸಾಲದು ಎಂಬಂತೆ ನಮ್ಮ ಋಷಿಗಳು ಪವಿತ್ರ ಕಾರ್ತಿಕ ಮಾಸದಲ್ಲಿ ಜನರು ಚಳಿಯ ಬಗ್ಗೆ ಯೋಚಿಸದಿರಲು ಹಲವಾರು ಆಚರಣೆಗಳಿಗೆ ಮತ್ತು ಪೂಜೆಗಳಿಗೆ ಉಪದೇಶಿಸುತ್ತಾರೆ. ಕಾರ್ತಿಕ ಮಾಸವು ಸೂರ್ಯ ದೇವನಿಗೆ ಸಮರ್ಪಿತವಾದ ಮಾಸ ಎಂದು ಪರಿಗಣಿಸಲಾಗುತ್ತದೆ. ಕಾರ್ತಿಕ ಮಾಸದಲ್ಲಿ ಸೂರ್ಯನಿಗೆ ವಿಶೇಷ ಪೂಜೆ ಹಾಗೂ ಧಾರ್ಮಿಕ ಆಚರಣೆಯನ್ನು ಕೈಗೊಳ್ಳಲಾಗುತ್ತದೆ. ಈ ಮೇಲ್ಕಂಡ ಎಲ್ಲಾ ಆಚರಣೆಯಲ್ಲಿ ಮನಸ್ಸಿನ ಅಜ್ಞಾನವು ಕಳೆಯುತ್ತದೆ. ಈ ರೀತಿಯ ದೀಪಾರಾಧನೆಗೆ ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿರುವ ಈ ಕಾರ್ತಿಕ ಮಾಸದಲ್ಲಿ ಮೊಟ್ಟಮೊದಲ ಬಾರಿಗೆ "ಲಕ್ಷ ದೀಪಾರಾಧನೆಗೆ" ಚಾಲನೆ ಕೊಟ್ಟಿದ್ದು ನಮ್ಮ ಮಲೆನಾಡು ಮತ್ತು ಕರಾವಳಿಯನ್ನು ಆಳಿದ ಇಕ್ಕೇರಿಯ ಹಿರಿಯ ವೆಂಕಟಪ್ಪ ನಾಯಕರು(1582-1629)ಮತ್ತು ಇದಕೆ ಸಾಕ್ಷಿ ಆಗಿದ್ದು ಇಕ್ಕೇರಿ ನಾಯಕರ ಇಷ್ಟದ ದೇವತೆ ಕೊಲ್ಲೂರು ಮುಕಾಂಬಿಕಾ ದೇವಿಯ ಸನ್ನಿಧಿ.

ಇಕ್ಕೇರಿ ಸಾಮ್ರಾಜ್ಯವನ್ನು ಪಶ್ಚಿಮ ಘಟ್ಟದ ಮೇಲಿಂದ ಘಟ್ಟದ ಕೆಳಗಿನವರೆಗೂ ವಿಸ್ತರಿಸಿದ ಕೀರ್ತಿ ಹಿರಿಯ ವೆಂಕಟಪ್ಪ ನಾಯಕರಿಗೆ ಸಲ್ಲುತ್ತದೆ.1610ರ ಹೊತ್ತಿಗೆ ಮಲೆನಾಡು ಮತ್ತು ಕರಾವಳಿಯನ್ನೂ ಸಂಪೂರ್ಣವಾಗಿ ಸ್ವಾಧಿನ ಧಾರ್ಮಿಕ ಸಂಸ್ಥೆಗಳಾದ ದೇವಾಲಯಗಳು, ಮಠಗಳು, ಚೈತ್ಯಾಲಯಗಳು, ಬಸದಿಗಳು ಹಿರಿಯ ವೆಂಕಟಪ್ಪ ನಾಯಕರ ರಾಜಧಾನಿ ಇಕ್ಕೇರಿಯ ಕೋಟೆಯ ಒಳಗೆ ಶಿಖರೇಶ್ವರ, ಲಕ್ಷ್ಮೀ

ನಾರಾಯಣ ಮತ್ತು ಮೈಲಾರ ದೇವಾಲಯಗಳನ್ನು, ಸದಾಶಿವಸಾಗರದಲ್ಲಿ (ಇಂದಿನ ಕವಲೇದುರ್ಗ) ಕೋಟೆಯಲ್ಲಿ ಕಾಶಿ ವಿಶ್ವನಾಥ, ಶಿಖರೇಶ್ವರ ಮತ್ತು ಲಕ್ಷ್ಮೀ ನಾರಾಯಣ ದೇವಾಲಯಗಳನ್ನು, ಬಾಣಾವರದ ಗಣಪತಿ ದೇವಾಲಯಗಳನ್ನು ಜೀರ್ಣೋದ್ಧಾರ, ಮತ್ತು ವಿಸ್ತರಣೆ ಮಾಡುತ್ತಾನೆ. ಅದರಲ್ಲಿ ಪ್ರಮುಖವಾಗಿದ್ದು ಕೆಳದಿಯ ಶ್ರೀ ರಾಮೇಶ್ವರ, ಇಕ್ಕೇರಿಯ ಅಘೋರೇಶ್ವರ, ಕೊಲ್ಲೂರು, ಮೂಕಾಂಬಿಕಾ, ಬಿದನೂರಿನ ನೀಲಕಂಠೇಶ್ವರ, ಉಡುಪಿಯ ಶ್ರೀಕೃಷ್ಣ ಮಠ ಮತ್ತು ಬಸರೂರಿನ ಮಹಾಲಿಂಗೇಶ್ವರ.

# ಶ್ರೀ ಮಹತೋಭಾರ ಮಹಾಲಿಂಗೇಶ್ವರ ದೇವಸ್ಥಾನ

ಶ್ರೀ ಕಾನಂಗಿ ಹರಿದಾಸ್‌ರಾವ್ ತಮ್ಮ 'ದೇವಸ್ಥಾನಗಳ ಆಚರಣೆಗಳು' ಎಂಬ ಲೇಖನದಲ್ಲಿ ತಿಳಿಸಿರುವಂತೆ ಶ್ರೀ ಮಹತೋಭಾರ ಮಹಾಲಿಂಗೇಶ್ವರ ದೇವಸ್ಥಾನ ಇತಿಹಾಸದಲ್ಲಿ ' ನಖರೇಶ್ವರ ದೇವಸ್ಥಾನ' ಎಂದು ಉಲ್ಲೇಖವಿದೆ. ರಾಜಧಾನಿಗೆ ಅರಮನೆ ಇದ್ದ ಹಾಗೆ, ಧರ್ಮಪಟ್ಟಣ ಬಸ್ರೂರಿಗೆ ಮಹಾಲಿಂಗೇಶ್ವರ ದೇವಸ್ಥಾನವಿದೆ. ಬಸ್ರೂರು, ಆನಗಳ್ಳಿ, ಬಳ್ಕೂರು, ಜಪ್ತಿ ಮತ್ತು ಕಂದಾವರ ಎಂಬ ಪಂಚಗ್ರಾಮಗಳಿಗೆ ಇದೇ ಪ್ರಧಾನ ದೇವಸ್ಥಾನ. ಹಿಂದೆ ಉಂಬಳಿಯಾಗಿ ಬಿಟ್ಟಿರುವ ಭೂಮಿಗಳಿದ್ದರೂ ಒಕ್ಕಲು ಮಸೂದೆಯಿಂದಾಗಿ ಸರ್ಕಾರವು ವಾರ್ಷಿಕ ಪರಿಹಾರ ರೂ 995.30ನ್ನು ಮತ್ತು ತಸ್ತೀಕು. ರೂ 2272.50 ನ್ನು ಪಡೆಯುತ್ತಿದ್ದು ನಿತ್ಯ ಮತ್ತು ವಿಶೇಷ ವಿನಿಯೋಗಗಳು ಭಕ್ತಾದಿಗಳ ಸೇವೆಯಿಂದಲೇ ನಡೆಯಬೇಕಾಗಿದೆ.

ಮಹಾಲಿಂಗೇಶ್ವರ ದೇವಸ್ಥಾನದ ಇತಿಹಾಸದ ಕುರಿತಂತೆ ಕ್ರಿ.ಶ 1606 ರ ನಂತರ ಕೆಳದಿ ವೆಂಕಟಪ್ಪ ನಾಯಕನು ಕೆಳದಿ ನಾಯಕರ ಪ್ರತ್ಯಕ್ಷ ಆಡಳಿತವನ್ನು ಸ್ಥಾಪಿಸಿದನು. ಇಲ್ಲಿ ಮಹಾಲಿಂಗ ದೇವರ ಪೂಜೆ ಲೋಪವಾಗದಂತೆ ನಿಯಮಗಳನ್ನು ಸ್ಥಾಪಿಸಿದನು. ಕೆಳದಿ ನಾಯಕರ ಆಳ್ವಿಕೆಯ ಕಾಲದಲ್ಲಿ ಬಸ್ರೂರು, ವ್ಯಾಪಾರ ಧಾರ್ಮಿಕ ಮತ್ತು ಆಡಳಿತದಲ್ಲೂ ಕೆಲವು ಬದಲಾವಣೆಗಳು ನಡೆದವು.

**<u>ಆಚರಣೆಗಳು</u>** : ಮಹಾಲಿಂಗೇಶ್ವರ ದೇವಸ್ಥಾನದ ಆಚರಣೆಗಳನ್ನು ನಿತ್ಯ, ಮಾಸ ವಿಶೇಷ ಮತ್ತು ವಾರ್ಷಿಕ ವಿಶೇಷ ಎಂದು ಮೂರು ಬಗೆಯಾಗಿ ವಿಂಗಡಿಸಿ ವಿವರಿಸಬಹುದು. ನಿತ್ಯವೂ ತ್ರಿಕಾಲ ಪೂಜೆ, ಷೋಡಷೋಪಚಾರ ಪೂಜೆ, ಆಗಮೋಕ್ತ ಬಲಿ ಹಿಂದೆ ನಡೆಯುತ್ತಿತ್ತು. ಸೋಮವಾರದಂದು ರುದ್ರಾಭಿಷೇಕ, ಬಿಲ್ವ ಪತ್ರಾರ್ಚನೆ ಮೊದಲಾದ ಹರಕೆಗಳು ಸಲ್ಲುತ್ತವೆ. ದೇವಸ್ಥಾನದ ಬಲಭಾಗದಲ್ಲಿರುವ ದುರ್ಗಾಪರಮೇಶ್ವರಿ, ಗಣಪತಿ ಮತ್ತು ಎಡಭಾಗದಲ್ಲಿರುವ ಮಹಿಷಮರ್ದಿನಿ, ವೀರಭದ್ರ ದೇವರಿಗೆ ಯಥೋಚಿತ ಪೂಜೆಗಳು ನಡೆಯುತ್ತಿವೆ.

ಮಾಸ ವಿಶೇಷಗಳಲ್ಲಿ ಪ್ರತಿ ಸಂಕ್ರಾಂತಿ ಎಂದು ನಡೆಯುವ ಹೂಗಿನತೇರು ಉತ್ಸವ ಬಲಿ ಮತ್ತು ಅಷ್ಟಾವಧಾನ ಸೇವೆಗಳು ಹಿಂದಿನ ವೈಭವವನ್ನು ನೆನಪಿಗೆ ತರುತ್ತವೆ. ಚೈತ್ರ ಮಾಸದಲ್ಲಿ ವರ್ಷಾವಧಿ ಜಾತ್ರೆ ನಡೆಯುತ್ತದೆ. ಶ್ರಾವಣ ಮಾಸ ಬಂತೆಂದರೆ ಎಲ್ಲಾ ಹಬ್ಬಗಳು ಸಾಂಗವಾಗಿ ಜರುಗುತ್ತವೆ. ಗೌರಿ– ಗಣೇಶ, ಅಷ್ಟಮಿ, ಸಾಮೂಹಿಕ ಕದಿರು ಹಬ್ಬಗಳಿಗೆಲ್ಲ ದೇವಸ್ಥಾನವೇ ಮುಖ್ಯ ಕೇಂದ್ರ. ಹಿರಿಯ ಕಲಾವಿದರ ಪುರಾಣ ವಾಚನ, ಕಾವ್ಯವಾಚನಗಳಿಗೂ ದೇವಸ್ಥಾನವೇ ಆಶ್ರಯ ಸ್ಥಾನ.

ಕಾರ್ತಿಕ ಅಮವಾಸ್ಯೆಯಂದು ಲಕ್ಷದೀಪೋತ್ಸವ ಧನುರ್ಮಾಸದಲ್ಲಿ ದೇವರಿಗೆ ನಿತ್ಯ ಹುಗ್ಗಿ ನೈವೇದ್ಯ ಮಾಘ ಬಹಳ ಚತುರ್ದಶಿ ಮಹಾಶಿವರಾತ್ರಿ ಅಹೋರಾತ್ರಿ ಭಜನೆ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳು. ಹಿಂದಿನ ಕಟ್ಟುಕಟ್ಟಳೆಗಳು ಅನೂಚಾನವಾಗಿ ನಡೆದುಕೊಂಡು ಬರುತ್ತಿರುವುದು. ಸ್ಥಳೀಯರ, ಆಡಳಿತ ವರ್ಗದ ಶ್ರದ್ಧೆ, ಶ್ರಮಗಳ ಫಲವಾಗಿದೆ. ಹತ್ತು ಹಲವು ವೈವಿಧ್ಯಮಯ ಕಾರ್ಯಕ್ರಮಗಳೊಂದಿಗೆ ಶಿವ–ಪಾರ್ವತಿಯರ

ಸಂಧಾನದೊಂದಿಗೆ ಹತ್ತು ದಿನಗಳ ರಥೋತ್ಸವದ ಸಂಭ್ರಮದ ಜಾತ್ರೆ ಮುಕ್ತಾಯವಾಗುತ್ತದೆ. ಬಸ್ರೂರಿನ ಪ್ರಧಾನ ದೇವಸ್ಥಾನದ ಈ ಎಲ್ಲಾ ಆಚರಣೆಗಳು ರಾಜ ವೈಭವದಿಂದ ನಡೆಯುತ್ತದ್ದರೆ, ಇಂದಿನ ಪ್ರಜಾಪ್ರಭುತ್ವದಲ್ಲಿ ಕೇವಲ ಕುರುಹಾಗಿ ಆಚರಣೆಯಲ್ಲಿರುವುದು ಕಂಡುಬರುತ್ತದೆ. ಕಾಲಕ್ಕೆ ತಕ್ಕಂತೆ ಬದಲಾವಣೆಯಾಗುವುದು ಅನಿವಾರ್ಯ. ಈಗ ಆಡಳಿತ ಮೊಕ್ತೇಸರರಾಗಿರುವ ಶ್ರೀ ಅಪ್ಪಣ್ಣ ಹೆಗ್ಡೆಯವರು ದೇವಸ್ಥಾ ನದ ಅಭಿವೃಧ್ಧಿಯ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದ್ದಾರೆ.

**ನಖರೇಶ್ವರ ದೇವಾಲಯ (ಪ್ರಾಚೀನ ಉಲ್ಲೇಖ):** ಬಸರೂರಿನ ಪ್ರಮುಖ ದೇವಾಲಯ ನಖರೇಶ್ವರ. ಪ್ರಾಚೀನ ಕಾಲದಿಂದಲೂ ಬಸರೂರು ಒಂದು ಬಂದರು ಮತ್ತು ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ಈ ವಹಿವಾಟು ನಡೆಸುತ್ತಿದ್ದ. 'ನಖರ' ಅಂದರೆ ವರ್ತಕ ಸಮುದಾಯ. ಇಲ್ಲಿ ಅಪಾರ ಸಂಖ್ಯೆಯಲ್ಲಿತ್ತು. ಇವರು ಶಿವನ ಆರಾಧಕರು. ಹಾಗಾಗಿ ಇವರ ಶಿವನಿಗೆ 'ನಖರೇಶ್ವರ' ಎಂದು ಹೆಸರು.

ನಖರೇಶ್ವರನ ಅತ್ಯಂತ ಪ್ರಾಚೀನ ಉಲ್ಲೇಖ ಕ್ರಿ.ಶ 1154 ಕ್ಕೆ ಸೇರುವ ಆಳುಪರಾಜ 'ಪಾಂಡ್ಯ ಚಕ್ರವರ್ತಿ ಭುಜಬಳ ವೀರ ಕವಿಯಾಳ್ವೇಂದ್ರ ದೇವನ ಶಾಸನದಲ್ಲಿ ಇಲ್ಲೇ ದೊರತಿರುವ ಕ್ರಿ.ಶ 1176 ಕ್ಕೆ ಸೇರುವ ಇದೇ ರಾಜನ ಇನ್ನೊಂದು ಶಾಸನದಲ್ಲೂ ನಖರೇಶ್ವರನನ್ನು ಪ್ರಸ್ತಾಪವಿದೆ. ಈ ನಖರೇಶ್ವರನನ್ನು "ಮಹಾದೇವ" ಬಸರೂರ ಪಡುವಕೇರಿಯ ಮಹಾದೇವ ಎಂದೂ ಹೆಸರಿಸುವ ಶಾಸನಗಳು ಇಲ್ಲಿವೆ.

ಮಾಹಾದ್ವಾರ ಹಾಗೂ ಮಂಟಪ, ಹೊರ ಪ್ರಾಕಾರ, ಧ್ವಜಸ್ತಂಭ ಕಂಚಿನ ದೀಪಸ್ತಂಭ, ಪ್ರಧಾನ ಬಲಿಪೀಠ, ಒಳಪ್ರಕಾರ, ಪ್ರಾಕಾರ ಮಂಟಪಗಳು ಈ ದೇವಾಲಯ ವಿವಿಧ ಅಂಗಗಳು ಒಳಪ್ರಕಾರದಲ್ಲಿ ನಂದಿ ಮಂಟಪ ಮತ್ತು ಗಣೇಶನ ಗುಡಿಗಳಿವೆ. ಒಳಪ್ರಾಕಾರ (ಹೊರ ಪ್ರಾಕಾರ ಸಹ) ಆಯತಾಕಾರದಲ್ಲಿದ್ದು ಬಹಳ ವಿಶಾಲವಾಗಿದೆ.

ಮಹಾದ್ವಾರ– ಮಂಟಪವು ಎಡಬಲದಲ್ಲಿ ಎತ್ತರವಾದ ಜಗತಿಯನ್ನು ಹೊಂದಿದೆ. ಜಗತಿಯ ಅಧಿಷ್ಟಾನದಲ್ಲಿ ಕುಸುರಿ ಕೆತ್ತನೆಯ ಗೂಡುಗಳಿವೆ. ಇಲ್ಲಿ ಮಕರ, ಶರಭ, ಕುಬ್ಜ ಇತ್ಯಾದಿ ಕೆತ್ತನೆಗಳಿವೆ. ಎಡಬದಿಯಲ್ಲಿನ ಕೆತ್ತನೆ ಸ್ವಲ್ಪ ಹಾಳಾಗಿದೆ. ಜಗತ್ತಿಯ ಮೇಲೆ ಬಾಗಿಲುವಾಡಕ್ಕೆ ಸಮಾನಾಂತರವಾಗಿ ಎಡ–ಬಲಗಳಲ್ಲಿ ಎರಡೆರಡು ಶಿಲಾಸ್ತಂಭಗಳಿವೆ. ಸುಂದರವಾದ ಕೆತ್ತನೆಯನ್ನು ಹೊಂದಿರುವ ಇವು ಬುಡದಲ್ಲಿ ಚೌಕ, ಮಧ್ಯದಲ್ಲಿ ಚಿತ್ರಪಟ್ಟಿಕೆಗಳುಳ್ಳ ವೃತ್ತ ಮತ್ತು ಛತ್ರದ ಆಕಾರ ಹೊಂದಿ, ಮೇಲ್ಭಾಗ ವೃತ್ತಾಕಾರಾವಾಗಿ ಮೇಲಿನಿಂದ ಕೆಳಗಿನವರೆಗೆ ಸರಳ ರೇಖೆಗಳನ್ನು ಹೊಂದಿವೆ. ಇವುಗಳ ತುದಿಯಲ್ಲಿ ಚತುರಸ್ರ ಆಕಾರ ಬೋದಿಗೆಗಳಿವೆ. ಇಲ್ಲಿನ ಮಹಾದ್ವಾರದ ಬಳಿಯಿರುವ ಸ್ತಂಭಗಳು ನವುರಾದ ಕೆತ್ತನೆಗಳಿಂದ ಕೂಡಿದೆ.

ಮಹಾದ್ವಾರ ದಾಟಿ ಒಳನಡೆದಾಗ ಸಿಗುವ ಪೀಠದ ಮೇಲೆ ಬೃಹತ್ ಕಂಚಿನ ದೀಪ ಸ್ತಂಭವಿದೆ. ಇದರ ಉಲ್ಲೇಖ ಪ್ರೊ.ಪಿ. ಗುರುರಾಜ ಭಟ್ ಇವರ "STUDIES IN TULUVA HISTORY AND CULTURE" ಪುಸ್ತಕದಲ್ಲಿ ಮಾಡಿರುತ್ತಾರೆ.

ಕಂಚಿನ ದೀಪಸ್ತಂಭದಲ್ಲಿ ಗಜಮುಖಗಳನ್ನೂ ರಚಿಸಲಾಗಿದೆ. ಗರ್ಭಗೃಹಕ್ಕೆ ಎದುರಾಗಿರುವ ಭಾಗದಲ್ಲಿರುವ ಮೇಲೆ ಗಜದ ಭುಜದ ಮೇಲೆ ಗಣಪತಿಯನ್ನು ರಚಿಸಲಾಗಿದೆ.

ಶ್ರೀ ಮಾಹಾಲಿಂಗೇಶ್ವರ ದೇವಸ್ಥಾನದ ಶಾಸನದ ಪಠ್ಯದಂತೆ

1. ವಿನಾಯಕ ದೇವರ

2. ಕಂಚಿನ ಕಂಬ 1ಕ್ಕೆ
3. ನಗ 44ಕ್ಕೆ ಅಶಲು
4. 92 ರಕ್ಕು 4

ಕ್ರಿ.ಶ 15–16ನೇ ಶತಮಾನಕ್ಕೆ ಸೇರಿದ ಈ ಶಾಸನದಲ್ಲಿ ಈ ಮೇಲಿನ ನಾಲ್ಕು ಸಾಲುಗಳು ಪತ್ತೆಯಾಗಿದೆ. ಒಂದು ಕಂಚಿನ ಕಂಬ ನಗ(ಹಣ) 44 ಅಸಲುನೊಂದಿಗೆ 92 ಸೇರು ಅಂದರೆ 85.84 ಕೆ.ಜಿ ಕಂಚುಗಳನ್ನು ಬಳಕೆ ಮಾಡಿರುವ ಬಗ್ಗೆ ಉಲ್ಲೇಖಿಸಲಾಗಿದೆ.

## ಬಸರೂರಿನ ವಿನೂತನ ವಿನಾಯಕ ದೇವರ ಕಂಚಿನ ಸ್ತಂಭ:

ನಮ್ಮ ದೇಶದ ಐತಿಹಾಸಿಕ ಪುರಾಣಗಳ ಪ್ರಕಾರ ಕರ್ನಾಟಕದ ಕರಾವಳಿಯ ವಾರಾಹಿ (ಹಾಲಾಡಿ) ನದಿಯ ದಂಡೆಯ ಮೇಲೆ ವಸು ಚಕ್ರವರ್ತಿ ಸಾಕಷ್ಟು ಪ್ರಮಾಣದಲ್ಲಿ ದೇವಾಲಯಗಳು ಮತ್ತು ಕೆರೆಗಳನ್ನು ನಿರ್ಮಾಣ ಮಾಡಿರುವ ಬಗ್ಗೆ ಉಲ್ಲೇಖ ಇದೆ. ಈ ಸ್ಥಳವನ್ನು ಬಸುರೇ ಪಟ್ಟಣ ಅಥವಾ ಬರಕಲೂರು ಎಂದು ಕರೆಯುತ್ತಿದ್ದ ಬಗ್ಗೆ ಉಲ್ಲೇಖ ಇದ್ದರೆ 17 ನೇ ಮತ್ತು 18 ನೇ ಶತಮಾನದಲ್ಲಿ ಶಾಸನದಲ್ಲಿ ವಸುಪುರ (ಸಂಸ್ಕೃತ ಪ್ರಭಾವಿತ) ಎಂದು ನಮೂದಿಸಲಾಗಿದೆ. ಇನ್ನೂ ಈ ಪ್ರದೇಶಕ್ಕೆ ಬಂದ ಸಹಸ್ರಾರು ಸಂಖ್ಯೆಯ ವ್ಯಾಪಾರಿಗಳು ಈ ಐತಿಹಾಸಿಕ ವ್ಯಾಪಾರಿಗಳು ಈ ಐತಿಹಾಸಿಕ ಪಟ್ಟಣವನ್ನು ಬಾರ್ಸಿಲರ್, ಬಸ್ನೂರ, ಬರೇಸ್, ಅಬು ಸರೂರ್ ಮತ್ತು ಬಾಸೇಲ್ಲರ್(BARCELOR, BASNUR, BARES, ABU-SARUR AND BARSELLOR) ಎಂದು ಕರೆಯುತ್ತಿದ್ದರು. ಆದರೆ ಇಂದು ಈ ಪ್ರಸಿದ್ಧ ಐತಿಹಾಸಿಕ ವ್ಯಾಪಾರಿ ಬಂದರು ಬಸರೂರು ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಅಂದಿನ ಕಾಲದಲ್ಲಿ (16 ನೇ ಶತಮಾನದಲ್ಲಿ) ಕರಾವಳಿಯ ಗೋವಾ, ಅಂಜೆಡೀವ್, ಮಿರ್ಜಾನ್, ಹೊನ್ನಾವರ, ಭಟ್ಕಳ, ಬಸರೂರು, ಬ್ರಹ್ಮಾವರ, ಬಾರಕೂರು, ಉಡುಪಿ, ಮಂಗಳೂರು, ಮುಂಜೇಶ್ವರ ಮತ್ತು ಕುಂಬಳ ಪ್ರಮುಖ ಬಂದರು ನಗರವಾಗಿರುತ್ತದೆ. ಕರಾವಳಿಯಲ್ಲಿ ಬೆಳೆಯುತ್ತಿದ್ದ ಅಕ್ಕಿಯನ್ನು ಅತಿ ಹೆಚ್ಚು ಶೇಖರಿಸಿ ವೀದೇಶೀ ವ್ಯಾಪಾರಸ್ಥರಿಗೆ ಸರಬರಾಜು ಮಾಡುತ್ತಿದ್ದ ಪ್ರಮುಖ ಬಂದರಿನ ಹೆಸರೆ 'ಬಸರೂರು'. ಬಸರೂರು ವಿಜನಗರ ಮತ್ತು ಬಾರಕೂರಿನ ಆಡಳಿತಕ್ಕೆ ಒಳಪಟ್ಟರು ಸಹಾ ಅಂದಿನ ಕಾಲದಲ್ಲಿ ವಿಶಿಷ್ಟವಾದ ಗಣರಾಜ್ಯ ಮಾದರಿಯ ಸರ್ಕಾರವನ್ನು ಹೊಂದಿತ್ತು. ಬಸರೂರಿನ ಪ್ರಜೆಗಳು ಹಿರಿಯ ಶ್ರೇಷ್ಠ ವ್ಯಕ್ತಿಗಳನ್ನು ಆಯ್ಕೆ ಮಾಡಿ ಅವರ ಮೂಲಕ ಆಡಳಿತವನ್ನು ನಡೆಸುತ್ತಿದ್ದರು. ಬಸೂರೂರಿನ ವ್ಯಾಪಾರಿಗಳು ಎಷ್ಟು ಶ್ರೀಮಂತರಾಗಿದ್ದರು ಎಂದರೆ ಇವರುಗಳು ತಮ್ಮ ಸಂಪತ್ತನ್ನು ಚಿನ್ನದ ಭಾರಸ್‌ಗಳಲ್ಲಿ ವರ್ಣಿಸುತ್ತಿದ್ದರು. ಇನ್ನೂ ನಮ್ಮ ದೇಶದ ನೌಕ ವ್ಯಾಪಾರ ವಹಿವಾಟು ಮತ್ತು ಚಟುವಟಿಕೆಯನ್ನು ಗಮನಿಸಿದರೆ ದಕ್ಷಿಣ ಭಾರತದ ಕಳಿಂಗ (ಇಂದಿನ ಒಡಿಸ್ಸಾ ಮತ್ತು ಈಶಾನ್ಯ (ಆಂಧ್ರಪ್ರದೇಶ), ಚೋಳರು ಮತ್ತು ಪಲ್ಲವರ ಹೆಸರು ಪ್ರಮುಖವಾಗಿ ಮುಂಚೂಣಿಯಲ್ಲಿ ಬರುತ್ತದೆ. ಇನ್ನೂ ಈ ನೌಕಾ ವ್ಯಾಪಾರದಲ್ಲಿ ತೊಡಗಿರುವ ದೇಶವಿದೇಶದ ವ್ಯಾಪಾರಸ್ಥರು ಅತ್ಯಂತ ಶ್ರೀಮಂತ ಮತ್ತು ಪ್ರಭಾವಶಾಲಿಯಾಗಿದ್ದು ಇವರ ಸ್ನೇಹವನ್ನು ಅರಸರು ಅಪೇಕ್ಷಿಸುತ್ತಿದ್ದರು. ಈ ವ್ಯಾಪಾರಿಗಳು ತಾವು ವ್ಯವಹರಿಸುವ ಪದಾರ್ಥ ಅಥವಾ ಸಾಮಾಗ್ರಿ ಪ್ರದೇಶದ ಅನುಸಾರ ವಿಶಿಷ್ಟವಾದ ಸಂಘಗಳನ್ನು (GUILDS) ಕಟ್ಟಿಕೊಂಡಿದ್ದರು.

ಬಸರೂರಿಗೆ ಸಂಬಂಧಿಸಿದಂತೆ ಸ್ಥಳೀಯ ನಖರ ಮತ್ತು ವಿದೇಶಿ ಹಂಜಮಾನ ವ್ಯಾಪಾರಿ ಸಂಘಗಳು ಬಹಳ ಹೆಸರುವಾಸಿಯಾಗಿದ್ದವು. ಹಂಜಮಾನ ವ್ಯಾಪಾರಿ ಸಂಘ ಇದು ಭಾರತಿಯೇತರ ವ್ಯಾಪಾರಿಗಳನ್ನು ಒಳಗೊಂಡಿದ್ದು ಇದರಲ್ಲಿ ಪರ್ಷಿಯನ್ನರು ಮತ್ತು ಅರಬ್ಬರು ಹೆಚ್ಚಾಗಿ ಕಂಡುಬರುತ್ತಿದ್ದರು. ಬಸರೂರಿನಲ್ಲಿ

ಇದ್ದ ಐತಿಹಾಸಿಕ 24 ದೇವಾಲಯಗಳಲ್ಲಿ ನಖರೇಶ್ವರ ದೇವಾಲಯ ಬಹಳ ಪ್ರಸಿದ್ಧವಾಗಿದ್ದು ಇದಕ್ಕೆ ಸಂಬಂಧಿಸಿದ ನಖರ ವ್ಯಾಪಾರಿ ಸಂಘ ಬಸರೂರಿನ ಬೆಳವಣಿಗೆಗೆ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ಬಸರೂರಿನ ನಖರೇಶ್ವರ ಮತ್ತು ತುಳುವೇಶ್ವರ ದೇವಾಲಯಗಳು 10ನೇ ಶತಮಾನದಲ್ಲಿ ನಿರ್ಮಾಣವಾಗಿದ್ದವು. ಬಸರೂರು ನಾಥ ಪಂಥಕ್ಕೆ ಸಂಬಂಧಿಸಿದಂತೆ ಪ್ರಮುಖ ಕೇಂದ್ರವಾಗಿತ್ತು. ಇನ್ನೂ ಇಲ್ಲಿನ ಹಲವಾರು ದೇವಾಲಯಳಿಗೆ ವಿಜಯನಗರದ ರಾಯರು ರಾಯರು ದತ್ತು ದಾನಗಳನ್ನು ನೀಡಿದ್ದು ಅವುಗಳನ್ನು ಜನರು ಇಂದಿಗೂ ಸಹಾ ನೆನಪಿಸಿಕೊಳುತ್ತಾರೆ.

# ಬಸರೂರಿನ ಶ್ರೀ ತಿರುಮಲ ವೆಂಕಟರಮಣ ದೇವಾಲಯ

ಬಸರೂರಿನ ಶ್ರೀ ತಿರುಮಲ ವೆಂಕಟರಮಣ ದೇವಾಲಯ ಮತ್ತು ಅದರ ಪರಿಸರ ಎಷ್ಟು ಅದ್ಭುತವಾಗಿದೆ. ಇಲ್ಲಿನ ವಿನಾಯಕ ದೇವರ ಕಂಚಿನ ದೀಪ ಸ್ತಂಭ. ಈ ಪುರಾತನ ಕಂಚಿನ ದೀಪಸ್ತಂಭದಲ್ಲಿ ಗರುಡ ಮತ್ತು ಅವನ ಆರಾಧ್ಯ ದೇವರಿಗೆ ಸಂಬಂಧಿಸಿದ ಪ್ರಸಂಗಗಳನ್ನು ತುಂಬಾ ಸುಂದರವಾಗಿ ತೋರಿಸಲಾಗಿವೆ. ನಮ್ಮ ಭಾರತದಲ್ಲಿ ದೇವಾಲಯದ ಮುಂಭಾಗದಲ್ಲಿ ಸ್ತಂಭಗಳನ್ನು ನಿಲ್ಲಿಸುವ ಪದ್ಧತಿ ಸರಿಸುಮಾರು 2 ನೇ ಶತಮಾನ ಬಿ.ಸಿ (2nd CENTURY B.C) ಇಂದ ಕಾಣಬಹುದು. ಉತ್ತರಾಭಿಮುಖವಾಗಿ ನಿರ್ಮಾಣ ಮಾಡಿರುವ ತಿರುಮಲ ವೆಂಕಟರಮಣ ದೇವಾಲಯ ಮುಂಭಾಗದಲ್ಲಿ ಆಯತಾಕಾರದಲ್ಲಿ ಕಲ್ಲಿನ ಅಡಿಪಾಯದ ಮೇಲೆ ಸ್ಥಾಪಿಸಿರುವ ಕಂಚಿನ ದೀಪಸ್ತಂಭದ ತನ್ನ ಒಡಲಿನಲ್ಲಿ ಸಾಕಷ್ಟು ಕೌತುಕವನ್ನು ಹಿಡಿದುಕೊಂಡಿದೆ. ಈ ಕಲ್ಲಿನ ಪೀಠದ ಮೇಲೆ ಮೊಟ್ಟ ಮೊದಲಿಗೆ ಉತ್ತರಾಭಿಮುಖವಾಗಿ ಆಮೆಯನ್ನು ಸ್ಥಾಪಿಸಿ ಅದರ ಬೆನ್ನಿನ ಮೇಲೆ ಇನ್ನೊಂದು ಪೀಠವನ್ನು ಸ್ಥಾಪಿಸಲಾಗಿದ್ದು ಇದರ ನಾಲ್ಕು ಮೂಲೆ ಮತ್ತು ಪ್ರತಿ ಬದಿಯ (ಭುಜ) ಮಧ್ಯದಲ್ಲಿ ಮೂರು ಹೆಡೆಯ ನಾಗನ ಶಿಲ್ಪವನ್ನು ರಚಿಸಿದ್ದು ಒಟ್ಟಾರೆ ಎಂಟು ಆನೆ ಮತ್ತು ಎಂಟು ನಾಗನ ಶಿಲ್ಪವನ್ನು ಈ ಪೀಠದಲ್ಲಿ ಕಾಣಬಹುದು. ಈ ಪೀಠದ ಮೇಲ್ಭಾಗದಲ್ಲಿ ಇನ್ನೊಂದು ಪೀಠವನ್ನು ಸ್ಥಾಪಿಸಿ ಅದರ ಮೇಲೆ ದಕ್ಷಿಣಾಭಿಮುಖವಾಗಿ ನಿಂತಿರುವ ಐರಾವತ ತರಹವೇ ಸಿಂಗಾರಗೊಂಡಿರುವ ಆನೆಯ ಕಿವಿ, ಕಣ್ಣು, ಎರಡು ದಂತ, ಹಣೆ ಮತ್ತು ಕಾಲುಗಳನ್ನು ಸುಂದರವಾಗಿ ಅಲಂಕರಿಸಲಾಗಿದೆ. ಆನೆಯ ಕುತ್ತಿಗೆಯ ಸುತ್ತಲೂ ಇನ್ನಷ್ಟು ಆಕರ್ಷವಾಗಿ ಕಾಣಿಸಲು ಸಹಕರಿಸುತ್ತದೆ. ಈ ಆನೆಯ ಬೆನ್ನಿನ ಮೇಲೆ ಪರ್ಷಿಯನ್ ಇಂಡೋ ಇಸ್ಲಾಮಿಕ್ ಶೈಲಿಯ ಕಟ್ಟಡ ಮಾದರಿಯ ದೇವಾಲಯವನ್ನು ಹೋಲುವ ಸುಂದರ ಕೆತ್ತನೆಯನ್ನು ಗಮನಿಸಬಹುದು. ಆನೆಯ ಹಿಂಬದಿಯಲ್ಲಿ ಮಾವುತ ತನ್ನ ಎಡಗೈಯಲ್ಲಿ ಹಿಡಿದುಕೊಂಡಿರುವ ಅಂಕುಶ ಮತ್ತು ಬಲಗೈ ಎರಡು ಕಳಚಿ ಬಿದ್ದಿದೆ. ಈ ಮಾವುತ ಧರಿಸಿರುವ ಅಂಗಿ,ವಸ್ತ್ರ, ಪೇಟ ಮತ್ತು ಆಭರಣ ಅಂದಿನ ಕಾಲದ ವಸ್ತ್ರ ವಿನ್ಯಾಸದ ಬಗ್ಗೆ ಹೆಚ್ಚಿನ ಬಗ್ಗೆ ಹೆಚ್ಚಿನ ಬೆಳಕು ಚೆಲ್ಲುತ್ತದೆ. ಇನ್ನೂ ಕೆಳಭಾಗದಲ್ಲಿ ಇರುವ ಆಮೆಯ ಹಣೆಯ ಮೇಲೆ ನಾಲ್ಕು ಸಾಲಿನ ಅಪ್ರಕಟಿತ ಶಾಸನವನ್ನು ಕಾಣಬಹುದು. ಈ ಆಮೆಯ ಕುತ್ತಿಗೆಯಲ್ಲಿ ರುದ್ರಾಕ್ಷಿಯ ಮಾಲೆಯನ್ನು ಸೂಕ್ಷ್ಮವಾಗಿ ಪಲ್ಲಕ್ಕಿಯ ಎಂಟು ಮಿನಾರ್ ಗಳನ್ನು ಹೋಲುವ ಕೆತ್ತನೆಯನ್ನು ಸೂಕ್ಷ್ಮವಾಗಿ ಗಮನಿಸಬಹುದು. ಇನ್ನೂ ಆನೆಯ ಬೆನ್ನಿನ ಮೇಲೆ ದೇವಾಲಯ ಆಕೃತಿಯ ಪಲ್ಲಕ್ಕಿಯ ಎಂಟು ಮಿನಾರ್ ಗಳನ್ನು ಹೋಲುವ ಕೆತ್ತನೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಅದು ವಾಸ್ತವದಲ್ಲಿ ನಾಗವನ್ನು ಹೋಲುತ್ತದೆ. ಈ ದೇವಾಲಯ ದಕ್ಷಣಾಭಿಮುಖವಾಗಿ ಅಂಜಲಿ ಮುದ್ರೆಯಲ್ಲಿ ಆಂಜನೇಯ ನಿಂತಿದ್ದರೆ ಇದೆ ಭಂಗಿಯಲ್ಲಿ ಗರುಡ ಮತ್ತು ಅವನ ಮಡದಿ ಉನ್ನತಿಯ ಕ್ರಮವಾಗಿ ಪೂರ್ವಾಭಿಮುಖವಾಗಿ ಮತ್ತು ಪಶ್ಚಿಮಾಭಿಮುಖವಾಗಿ ನಿಂತಿರುವುದು ಗಮನೀಯ ಅಂಶ. ಇನ್ನೂ ಉತ್ತರಭಿಮುಖವಾಗಿ ಕೃಷ್ಣನ ಬಾಲ ಜೀವನವನ್ನು ನಿರ್ದೇಶಿಸುವ ಚಿತ್ರವನ್ನು ಕೆತ್ತಲಾಗಿದೆ. ಈ ದೇವಾಲಯ ಆಕೃತಿಯ ಪಲ್ಲಕ್ಕಿಯ ಮೇಲ್ಭಾಗದಲ್ಲಿ

ದೀಪಸ್ತಂಭವನ್ನು ನಿರ್ಮಾಣ ಮಾಡಲಾಗಿದೆ. ಒಟ್ಟು 13 ಕೊಳವೆಗಳನ್ನು ಒಂದರೊಳಗೆ ದೀಪದ ಪಣತೆಗಳನ್ನು ಈ ದೀಪದ ಸ್ತಂಭದಲ್ಲಿ ಕಾಣಬಹುದು. ಈ ದೀಪ ಸ್ತಂಭದ ಸೌಂದರ್ಯ ವೃದ್ಧಿಯಾಗಿದೆ.

# ದೀಪ ಸ್ತಂಭದಲ್ಲಿ ಕೆತ್ತಲಾಗಿರುವ ಶಿಲ್ಪಗಳು ಮತ್ತು ಅದರ ಹಿನ್ನೆಲೆ

ನಮ್ಮ ವೇದ ಪುರಾಣಗಳಲ್ಲಿ ವಿಷ್ಣುವಿನ ದಶಾವತಾರದಲ್ಲಿ ಎರಡನೇ ಅವತಾರವಾಗಿರುವ ಕೂರ್ಮ ಅವತಾರ ಮತ್ತು ಅದಕ್ಕೆ ಸಂಬಂಧಿಸಿದಂತೆ ವಿವರವಾದ ವಿವರಣೆಗಳನ್ನು ನೀಡಲಾಗಿದೆ. ಸಮುದ್ರಮಂಥನದ ಸಮಯದಲ್ಲಿ ವಿಷ್ಣು ಕೂರ್ಮ ಅವತಾರದಲ್ಲಿ ಭೂಮಿಯನ್ನು ತನ್ನ ಬೆನ್ನಿನಮೇಲೆ ಇರಿಸಿಕೊಂಡು ಭೂಮಿಗೆ ಆಸರೆಯಾಗುತ್ತಾನೆ ಹಾಗಾಗಿ  ಇದನ್ನು ಸೂಚಿಸಲು ಆಮೆಯನ್ನು ಈ ದೀಪಸ್ತಂಭದ ಬುಡದಲ್ಲಿ ಸ್ಥಾಪಿಸಲಾಗಿದೆ. ನಮ್ಮ ಕೆಲವು ಪುರಾಣಗಳಲ್ಲಿ ಭೂಮಿಯು ಅಲುಗಾಡುವಾಗ ಆನೆಗಳು ಅಷ್ಟದಿಕ್ಕಿನಲ್ಲಿ ತಮ್ಮ ಹಿಂಭಾಗವನ್ನು ಭೂಮಿಗೆ ವರಗಿ  ಅದನ್ನು ಸ್ಥಿರ ಮಾಡಿದವು ಎಂದು ಹೇಳಿದರೆ, ಇನ್ನೂ ಕೆಲವು ಪುರಾಣಗಳಲ್ಲಿ ನಾಗ ಅಷ್ಟದಿಕ್ಕಿನಲ್ಲಿ ಭೂಮಿಗೆ ಆಸರೆಯಾಗಿರುವ ಬಗ್ಗೆ ಉಲ್ಲೇಖವಿದೆ. ಹಾಗಾಗಿ ಬಸರೂರಿನ ಕಂಚಿನ ದೀಪಸ್ತಂಭದಲ್ಲಿ ಒಟ್ಟು ಎಂಟು ಆನೆ ಮತ್ತು ಎಂಟು ನಾಗನನ್ನು ಕೆತ್ತಲಾಗಿದೆ. ಎಂಟು ದಿಕ್ಕಿನಲ್ಲಿ ಕೆತ್ತಲಾಗಿರುವ ಆನೆಗಳಿಗೆ ಸುಂದರವಾದ ಹೆಸರುಗಳಿದ್ದು ಅದರಲ್ಲಿ ಬಹಳ ಪ್ರಮುಖ ವಾಗಿರುವ ಪೂರ್ವ ದಿಕ್ಕಿನಲ್ಲಿರುವ ವಿರೂಪಾಕ್ಷ, ಪಶ್ಚಿಮ ದಿಕ್ಕಿನಲ್ಲಿರುವ ಸೌಮನಸ, ಉತ್ತರ ದಿಕ್ಕಿನಲ್ಲಿರುವ ಇರುವ ಭದ್ರ ಮತ್ತು ದಕ್ಷಿಣ ದಿಕ್ಕಿನಲ್ಲಿರುವ ಇರುವ ಮಹಾಪದ್ಮ. ವಿಷ್ಣುವಿನ ವಾಹನವಾಗಿರುವ ತನ್ನನ್ನು ತಾನೇ ಶ್ರೀ ವಿಷ್ಣುವಿನ ಮಹಾನ್ ಭಕ್ತಯೆಂಬ ಅಹಂಕಾರ ಪಿತ್ತ ಏರಿದಾಗ ಇದನ್ನು ತಗ್ಗಿಸಲು ಶ್ರೀ ಕೃಷ್ಣ ಒಂದು ಜಾಲವನ್ನು ಹೆಣೆದು ಆಂಜನೇಯನ ಸಹಾಯದಿಂದ ಗರುಡನ ಅಹಂಕಾರವನ್ನು ಮುರಿಯಲು ರಚಿಸಿದ ಜಾಲವೇ ಗರುಡ ಭಂಗ. ಈ ತಿರುಮಲ ವೆಂಕಟರಮಣ ಸ್ವಾಮಿಯ  ಗರ್ಭಗುಡಿ ಯನ್ನು ನೋಡಿದರೆ ಗರುಡ ಶ್ರೀ ಕೋಟೆ ಆಂಜನೇಯ ಗರ್ಭಗುಡಿ ಯನ್ನು ನೋಡುತ್ತ ಅಂಜಲಿ ಮುದ್ರೆಯನ್ನು ನಮಸ್ಕರಿಸುವ ದೃಶ್ಯ ನಿಜಕ್ಕೂ ಅದ್ಭುತ. ಈ ಕೋಟೆ ಆಂಜನೇಯ ದೇವಾಲಯ ಶ್ರೀ ತಿರುಮಲ ವೆಂಕಟರಮಣ ಸ್ವಾಮಿಯದ ಬಲದಲ್ಲಿ ಇದ್ದು ಪಶ್ಚಿಮಾಭಿಮುಖವಾಗಿದೆ. ಇನ್ನೂ ತಿರುಮಲ ವೆಂಕಟರಮಣ ದೇವಾಲಯದ ಎಡಭಾಗದಲ್ಲಿ ಇರುವ ಪುಷ್ಕರಣಿಯ ದಂಡೆಯ ಮೇಲೆ ನಿರ್ಮಿಸಿರುವ ಪೂರ್ವಾಭಿಮುಖ ಉಮಾ ಮಹೇಶ್ವರ ದೇವರ ಗರ್ಭಗುಡಿಯನ್ನು ನೋಡುತ್ತಿರುವ ಶಿಲ್ಪ ನೋಡಲು ಗರುಡನ ತರಹವೇ ಕಾಣಿಸಿದ್ದು ಇದು ಗರುಡನ ಮಡದಿ ಉನ್ನತಿಯ ಶಿಲ್ಪವಾಗಿದೆ. ಇನ್ನೂ ಗರುಡ ಗರ್ವಭಂಗ ಸೂತ್ರಧಾರ ಶ್ರೀ ಕೃಷ್ಣನ ಬಾಲಜೀವನವನ್ನು ವರ್ಣಿಸುವ ಒಂದು ದೃಶ್ಯವನ್ನು ತುಂಬಾ ಸೊಗಸಾಗಿ ಕೆತ್ತಲಾಗಿದೆ. ಇನ್ನೂ ದೀಪ ಸ್ತಂಭದ ನಿರ್ಮಾಣ ಮಾಡಿರುವ ಒಂದು ದೃಶ್ಯ ದೀಪ ಸ್ತಂಭದ  ಉತ್ತರಭಿಮುಖವಾಗಿ ಕೆತ್ತಲಾಗಿದೆ.  ಇನ್ನೂ ದೀಪಸ್ತಂಭವನ್ನು ನಿರ್ಮಾಣ ಮಾಡಿರುವ  ಪದ್ಧತಿಯು ಸಹ ರೋಚಕವಾಗಿದೆ. ಅಂದಿನ ಕಾಲದಲ್ಲಿ ಸಾಮಾನ್ಯವಾಗಿ ಮರ ಅಥವಾ ಕಬ್ಬಿಣದ ಕಂಬವನ್ನು  ಕಲ್ಲಿನ ಅಡಿಪಾಯದಮೇಲೆ ನಿಲ್ಲಿಸಿ ಅದರ ಸುತ್ತಲೂ ಕಂಚಿನಿಂದ ಕಂಬವನ್ನು ಕಲ್ಲಿನ ಅಡಿಪಾಯದ ಮೇಲೆ ನಿಲ್ಲಿಸಿ ಅದರ ಸುತ್ತಲೂ  ಕಂಚಿನಿಂದ ವಿವಿಧ ಆಕೃತಿಯ ಶಿಲ್ಪಗಳು ಮತ್ತು ಹಣತೆಯನ್ನು ನಿರ್ಮಾಣ ಮಾಡಲಾಗಿದೆ.

# ವೈಷ್ಣವ ಕಂಚಿನ ಕಂಬದ ವಿವರ

ನೂರಾರು ವರ್ಷಗಳ ಕಾಲ ದೀಪವನ್ನು ಹಚ್ಚುವ ಮೂಲಕ ಈ ಕಂಚಿನ ದೀಪ ಸ್ತಂಭ ಕರಿ ಕಟ್ಟಿದ ಪರಿಣಾಮವಾಗಿ ಆಮೆಯ ಹಣೆಯ ಮೇಲ್ಭಾಗದಲ್ಲಿ ಇದ್ದ ನಾಲ್ಕು ಸಾಲಿನ ಶಾಸನ ಯಾರ ಕಣ್ಣಿಗೂ ಬೀಳಲ್ಲಿಲ್ಲ. ಆದರೆ ಬಸರೂರಿನ ಯುಬ್ರಿಗೇಡ್ ತರುಣರು ಕೈಗೊಂಡು ಶ್ರಮ ದಾನದ ಫಲಶೃತಿಯಾಗಿ ಕಂಚಿನ ಕಂಭದ ಕೆಳಭಾಗ ಇಂದು ಫಳ ಫಳವಾಗಿ ಹೊಳೆಯುತ್ತಿದ್ದು ಸ್ಥಳೀಯ ನಿವಾಸಿಯಾಗಿರುವ ಶ್ರೀ ಪ್ರದೀಪ ಕುಮಾರ ಬಸರೂರು ಅವರು ಈ ಶಾಸನವನ್ನು ಮೊಟ್ಟಮೊದಲ ಬಾರಿಗೆ ನೋಡಿ ಇದನ್ನು ಓದಿ ಜನರ ಗಮನಕ್ಕೆ ತರಲು ಸಫಲರಾಗಿದ್ದಾರೆ. ಶ್ರೀ ಪ್ರದೀಪ್ ಕುಮಾರ್ ಬಸರೂರು ಅವರು ಕಂಡುಹಿಡಿದು ಓದಿದ ಅಪ್ರಕಟಿತ ಶಾಸನದಲ್ಲಿ ಇರುವ ನಾಲ್ಕು ಸಾಲುಗಳು ಈ ರೀತಿಯಾಗಿ ಇರುತ್ತದೆ.

1. ವಿನಾಯಕ ದೇವರು
2. ಕಂಚಿನ ಕಂಬ
3. ನಗ 44ಕ್ಕೆ ಅಶಲು
4. 49//3//0

ಡಾ ಜಗದೀಶ್ ಅಗಸಿಬಾಗಿಲು (ಪುರಾತತ್ವ, ಶಾಸನ ಮತ್ತು ಪುರಾತನ ಮಾಪನ ತಜ್ಞರು) ಅವರ ಅನಿಸಿಕೆ ಪ್ರಕಾರ ಈ ಶಾಸನದಲ್ಲಿ ತಗಲುವ ವೆಚ್ಚವನ್ನು ಉಲ್ಲೇಖಿಸಲಾಗಿದೆ. ಸರಿಸುಮಾರು 49 ಸೇರು ಅಂದರೆ 45.73 ಕೆಜಿ ತೂಕದ ಅಂದಿನ ಕಾಲದಲ್ಲಿ ಚಾಲ್ತಿಯಲ್ಲಿದ್ದ ನಾಣ್ಯಕ್ಕೆ ಸಮನಾದ ಕಂಚನ್ನು ಈ ದೀಪಸ್ತಂಭದಲ್ಲಿ ಉಪಯೋಗಿಸಲಾಗಿದೆ. ಇನ್ನೂ ಈ ಶಾಸನದಲ್ಲಿ ಕೆತ್ತಲಾಗಿರುವ ಶಿಲ್ಪಗಳ ಶೈಲಿಯನ್ನು ಸೂಕ್ಷವಾಗಿ ಗಮನಿಸಿದರೆ. ಈ ಸ್ತಂಭವನ್ನು ವಿಜಯನಗರದ ಕೊನೆಯ ಕಾಲಘಟ್ಟದಲ್ಲಿ ಅಥವಾ ಕೆಳದಿ(ಇಕ್ಕೇರಿ) ನಾಯಕರ ಪ್ರಥಮ ಕಾಲಘಟ್ಟದಲ್ಲಿ ನಿರ್ಮಾಣ ಮಾಡಿರುವ ಬಗ್ಗೆ ಒಮ್ಮತ ಮೂಡುತ್ತದೆ. ಡಾ ಜಗದೀಶ ಅಗಸಿಬಾಗಿಲು ಅವರು ಸಹಾ ಈ ವಿನಾಯಕ ದೇವರ ಕಂಚಿನ ದೀಪಸ್ತಂಭವು 16 ನೇ ಶತಮಾನದ ಪ್ರಥಮ ಕಾಲಘಟ್ಟಕ್ಕೆ ಸೇರಿದ್ದು ಎಂದು ಅಭಿಪ್ರಾಯ ಪಡುತ್ತಾರೆ. ನಮ್ಮ ದಕ್ಷಿಣ ಭಾರತದ ಕರಾವಳಿಯಲ್ಲಿ ಅಂದರೆ ಗೋವಾಯಿಂದ ಕೇರಳದವರೆಗೂ ರಾಜರು, ವ್ಯಾಪಾರಿಗಳು, ವ್ಯಾಪಾರಿಗಳು , ಸಂಘಗಳು ಹಾಗೂ ಸಾರ್ವಜನಿಕರು ದೀಪದ ಸ್ತಂಭವನ್ನು ನಿರ್ಮಿಸಿರುವ ಬಗ್ಗೆ ಮಾಹಿತಿ ಇದೆ. ಇನ್ನೂ ಆಮೆಯ ಮೇಲೆ ಸ್ತಂಭವನ್ನು ನಿರ್ಮಿಸಿರುವ ಬಗ್ಗೆ ಮಾಹಿತಿ ಇದೆ. ಇನ್ನೂ ಆಮೆಯ ಮೇಲೆ ಸ್ತಂಭವನ್ನು ನಿರ್ಮಾಣ ಮಾಡುವ ಅದೆಷ್ಟೂ ಶತಮಾನಗಳಿಂದ ನಡೆದುಕೊಂಡು ಬಂದಿದ್ದು ಇದನ್ನು ಇಂದು ಹಲವಾರು ಸುಪ್ರಸಿದ್ಧ ಪುರಾತನ ದೇವಾಲಯಗಳಲ್ಲಿ ಇಂದಿಗೂ ಸಹ ಕಾಣಬಹುದು. ಐನೂರು ವರ್ಷಗಳ ಹಿಂದೆ ಬಸರೂರಿನ ವಿನಾಯಕ ಕಂಚಿನ ದೀಪಸ್ತಂಭದಲ್ಲಿ ಉನ್ನತಿ ನೋಡುತ್ತಿದ್ದರೆ ಇಂದು ಎಲ್ಲವೂ

ಬದಲಾಗಿದೆ. ದೀಪಸ್ತಂಭ ಮತ್ತು ಕೋಟೆ ಆಂಜನೇಯ ದೇವಾಲಯ ಪಾಳುಬಿದ್ದಿದ್ದು ಇವೆರಡರ ನಡುವೆ ಸಭಾಂಗಣ ನಿರ್ಮಾಣವಾಗಿದೆ.

# ಫಲಿತಗಳು

ಐತಿಹಾಸಿಕ ಪಟ್ಟಣವಾದ ಬಸ್ರೂರಿನ ಗತವೈಭವವಕ್ಕೆ ಸಾಕ್ಷಿಯಾದ ಈ ಅಧ್ಯಯನದ ಕಂಚಿನ ಕಂಬಗಳು ಹಲವು ವೈಶಿಷ್ಟ್ಯತೆಗಳನ್ನು ಹೊಂದಿವೆ.

ಇವುಗಳ ಕೆತ್ತನೆ, ಪಟ್ಟಿಗಳ ನಿರ್ಮಾಣ, ಅಂದಿನ ಕುಸೂರಿ ಕೆಲಸದ ಕಲ್ಮಾಕತೆಯನ್ನು ತಿಳಿಸಿಕೊಡುತ್ತವೆ.

ವೈಷ್ಣವ ಹಾಗು ಶೈವ ಪಂಥದ ಕುರುಹುಗಳೆನಿಸಿವೆ.

ಸುಮಾರು ಸಾವಿರ ವರ್ಷಗಳಿಗೂ ಪ್ರಾಚೀನ ಇತಿಹಾಸವನ್ನು ಹೊಂದಿರುವ ದೇಗುಲಗಳು ಬಸ್ರೂರಿನಲ್ಲಿದ್ದು ಐತಿಹಾಸಿಕ ಮಹತ್ವಪಡೆದಿದೆ.

*ಈ ಶಾಸನಯುಕ್ತ ಕಂಚಿನ ಕಂಬಗಳು ದೊರೆತಿರುವುದು ಬಹಳ ಅಪರೂಪವೆನಿಸಿದೆ.

* ಈ ಎರಡು ಕಂಚಿನ ಕಂಬಗಳು ಕೆಳದಿ ರಾಜಮನೆತನಕ್ಕೆ ಸಂಬಂಧಿಸಿದಂತೆ ಕಂಡುಬರುತ್ತದೆ.

* ಕ್ರಿ. ಶ 15 ಮತ್ತು 16 ನೇ ಶತಮಾನ ಅಂದರೆ ನಾನೂರು ಅಥವಾ 500 ವರ್ಷಗಳ ಪ್ರಾಚೀನತೆಯನ್ನು ಹೊಂದಿದೆ.

**ಶ್ರೀ ತಿರುಮಲ ವೆಂಕಟರಮಣ ದೇವಸ್ಥಾನ (ವೈಷ್ಣವ)ಕಂಚಿನ ದೀಪದಕಂಬದ ಅಡಿಗಲ್ಲು ಅಳತೆ :**

ಅಗಲ – 4.6 ಅಡಿ

ಉದ್ದ – 5.7 ಅಡಿ

ಎತ್ತರ – 1.10 ಅಡಿ

**ಕೂರ್ಮನ ಚಿತ್ರದ ಅಳತೆ :**

ಅಗಲ – 3.4 ಅಡಿ

ಉದ್ದ – 2.11 ಅಡಿ

ಎತ್ತರ – 2.5 ಅಡಿ

**ಶ್ರೀ ಮಹಾಲಿಂಗೇಶ್ವರ ದೇವಸ್ಥಾನ (ಶೈವ) ಕಂಚಿನ ದೀಪದ ಕಂಬದ ಅಳತೆಯ ವಿವರ :**

ಅಡಿಗಲ್ಲಿನ ಅಳತೆ

ಎತ್ತರ – 2.2 ಅಡಿ

ಉದ್ದ – 5.4 ಅಡಿ

ಅಗಲ – 5.1 ಅಡಿ

ಕಂಬದ ಎತ್ತರ ಅಂದಾಜು ಸುಮಾರು 15 ಅಡಿ.

## ಉಪಸಂಹಾರ

ಬಸ್ರೂರಿನಲ್ಲಿ ದೊರೆತ ಈ ಎರಡು ಕಂಚಿನ ಕಂಬಗಳು ಗತವೈಭವದ ಅದ್ಭುತ ಕುರುಹುಗಳಾಗಿವೆ. ಇಂಥ ಹಲವು ಶಿಲ್ಪ ಕಲೆಗಳು ಅಂದಿನ ವೈಭವದ ಕಥೆಗಳನ್ನು ತಿಳಿಸಲು ಸಾಕ್ಷಿಯನ್ನು ಒದಗಿಸುತ್ತವೆ.

ಇಂದು ಶಾಸನಾಧ್ಯಯನವು ಬಹುತೇಕ ಪ್ರಕಟಿತ ಶಾಸನಗಳ ಅಧ್ಯಯನವಷ್ಟೇ ಆಗುತ್ತಿದೆ. ಇಂಥ ಅಪ್ರಕಟಿತ ಶಾಸನಗಳ ಶೋಧನೆ, ಪರಿಷ್ಕರಣೆ ಹಾಗೂ ಶಾಸ್ತ್ರೀಯ ಸಂಪಾಧನೆ ಹೆಚ್ಚಿನ ಪ್ರಮಾಣದಲ್ಲಿ ನಡೆಯಬೇಕಾಗಿದೆ. ಕೆಲವೇ ಜನ ತಜ್ಞರು ಮತ್ತು ಕೆಲವೇ ಹವ್ಯಾಸಿ ಸಂಶೋಧಕರು ಮಾತ್ರ ಈ ದಿಸೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಶಾಸನಗಳ ಬಗ್ಗೆ ಆಸಕ್ತಿ ಇದ್ದರೂ ಸಹ ಹೆಚ್ಚಿನ ಜನರಿಗೆ ಈ ಕ್ಷೇತ್ರದಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಜೊತೆಗೆ ಲಿಪಿಶಾಸ್ತ್ರದ ಜ್ಞಾನವಿರಬೇಕು. ಹೆಚ್ಚೆಚ್ಚು ಯುವ ಮನಸ್ಸುಗಳು ತಮ್ಮ ಪರಂಪರೆಯ ಅನನ್ಯತೆಯನ್ನು ಉಳಿಸುವ ಈ ಕಾಯಕದಲ್ಲಿ ತೊಡಗಿಸಿಕೊಳ್ಳಲು ಮುಂದೆ ಬರಬೇಕಾಗಿದೆ.

ಸಾಕಷ್ಟು ವಿಶೇಷತೆಗಳನ್ನು, ಪೌರಾಣಿಕ ಹಿನ್ನಲೆಯನ್ನು ಹೊಂದಿರುವ ಕಂಚಿನ ಕಂಬಗಳ ಕಾಲ, ಕೆತ್ತನೆ, ಅಳತೆ, ರಾಜಮನೆತನ ಈ ಮುಂತಾದ ಕೆಲವು ವಿಚಾರಗಳನ್ನು ಈ ಅಧ್ಯಯನದಲ್ಲಿ ತಿಳಿಸಲಾಗಿದೆ.

ಭಾರತದಲ್ಲಿ ಅದರಲ್ಲೂ ವಿಶೇಷವಾಗಿ ಕರ್ನಾಟಕದಲ್ಲಿ ಕಲ್ಲಿನ ಮೇಲೆ, ಸ್ತಂಭಗಳ ಮೇಲೆ, ದೇವಸ್ಥಾನದ ಗೋಡೆಗಳ ಮೇಲೆ, ವಿಗ್ರಹಗಳ ಪೀಠಗಳ ಮೇಲೆ, ತಾಮ್ರಪಟಗಳ ಮೇಲೆ, ಪಾತ್ರೆಗಳ ಮೇಲೆ ಶಾಸನಗಳು ದೊರೆತಿವೆ.

ಯಾವುದೇ ಒಂದು ಪ್ರದೇಶದ ಅಥವಾ ಯಾವುದೇ ಒಂದು ಕಾಲಘಟ್ಟದ ಇತಿಹಾಸ, ಸಂಸ್ಕೃತಿ ಮುಂತಾದ ವಿಷಯಗಳನ್ನು ತಿಳಿದುಕೊಳ್ಳಲು ಬಹುಮುಖ್ಯ ಆಕರಗಳೆಂದರೆ ಶಾಸನಗಳೆಂದು ಹೇಳಬಹುದು. ಕಾವ್ಯಗಳಿಂದಲೂ ಸ್ವಲ್ಪ ಪ್ರಮಾಣದ ಮಾಹಿತಿ ದೊರೆತರೂ ಸಹ ಕಾವ್ಯಗಳಲ್ಲಿ ಕಲ್ಪನೆ ಹಾಗೂ ಉತ್ಪ್ರೇಕ್ಷೆಗಳ ಪ್ರಮಾಣ ಹೆಚ್ಚಾಗಿರುತ್ತದೆ. ಶಾಸನಗಳಲ್ಲಾದರೆ ಅತ್ಯಂತ ನಿಕರವಾದ ಮಾಹಿತಿ ದೊರಕುತ್ತದೆ. ಆದ್ದರಿಂದ ಸಾಂಸ್ಕೃತಿಕ ಅಧ್ಯಯನದ ದೃಷ್ಟಿಯಿಂದ ಶಾಸನಾಧ್ಯಯನ ಅತ್ಯಂತ ಹೆಚ್ಚಿನ ಮಹತ್ವನ್ನು ಹೊಂದಿದೆ.

# ಪರಾಮರ್ಶನ ಗ್ರಂಥಗಳು


1) ಡಾ.ಎಂ.ಜಿ. ಮಂಜುನಾಥ, ಪ್ರೊ.ಜಿ.ಕೆ. ದೇವರಾಜ ಸ್ವಾಮಿ, 2019, ಕನ್ನಡ ಲಿಪಿ ವಿಕಾಸ, ಯುವ ಸಾಧನೆ ಬೆಂಗಳೂರು.

2) ಶ್ರೀ ಅಜಯ್ ಕುಮಾರ್ ಶರ್ಮಾ, 2023, ಶ್ರೀ ಶಾರದಾ ಪಬ್ಲಿಕೇಶನ್, ಶ್ರೀ ಶಾರದಾ ಕೃಪಾ, ಶಿವಮೊಗ್ಗ.

3) ಡಾ. ಕನರಾಡಿ ವಾದಿರಾಜ ಭಟ್ಟ (ಸಂ), 1997, ಹೆಸರಾದ ಪಟ್ಟಣ ಬಸ್ರೂರು ಒಂದು ಅಧ್ಯಯನ, ಶ್ರೀ ಶಾರದಾ ಕಾಲೇಜು ಟ್ರಸ್ಟ್ (ರಿ.) ಬಸ್ರೂರು.

4) ಡಾ. ಎಂ. ಚಿದಾನಂದ ಮೂರ್ತಿ, 1966, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ. 450–ಕ್ರಿ.ಶ. 1150), ಪ್ರಸಾರಾಂಗ, ಮೈಸೂರು ವಿ.ವಿ.

5) ಪ್ರೊ. ಪಿ. ಗುರುರಾಜ ಭಟ್–"Studies in Tuluva History and Culture"

6) ಪಿ.ಎನ್. ನರಸಿಂಹಮೂರ್ತಿ ಸ್ವಾಗತ ಸಮಿತಿ ಕುಂದನಾಡಿನ ಶಾಸನಗಳು

7) ಡಾ. ಶೈಲಾ ಟಿ.ವರ್ಮ ಜ್ಞಾನೋದಯ ಪ್ರಕಾಶನ ಬೆಂಗಳೂರು–79 ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ 2002

8) ಡಾ. ಎಸ್. ತಿಪ್ಪಯ್ಯ ಸ್ವಾಮಿ ಕರ್ನಾಟಕ ಸಂಸ್ಕೃತಿ ಸಮೀಕ್ಷೆ, 1968




vivo T1

ಮಹತೋಭಾರ ಮಹಾಲಿಂಗೇಶ್ವರ ದೇವಸ್ಥಾನದ










